# 8

# ಬುಡವನ್ನು ಮುಟ್ಟದೆ ಶಿಖರವನ್ನು ತಲುಪುವುದು ಹೇಗೆ

## (2 ಸಮುವೇಲ 8-12; 21; 23; 1 ಪೂರ್ವಕಾಲವೃತ್ತಾಂತ 11:18-20; 23; 27)

ಸ್ವಯಂ ಅಭಿವೃದ್ಧಿಯ ಕುರಿತಾಗಿ, ಹೇಗೆ ಸಫಲರಾಗಬೇಕು, ಮತ್ತು ಸೋಲನ್ನು ಎದುರಿಸುವದು ಹೇಗೆ ಎಂದು ಬಂಡಾರದಲ್ಲಿ ದೊರಕುವ ಪುಸ್ತಕಗಳ ಅನೇಕ ಭಾಗಗಳಲ್ಲಿ ನೋಡುತ್ತೇವೆ. ಯಶಸ್ಸಿಗೆ, *ಸಂಪೂರ್ಣ ಸೂತ್ರಗಳು, ಗೆಲ್ಲುವ ತಂತ್ರ, ಗೆಲ್ಲುವದಕ್ಕಾಗಿಯೇ ಹುಟ್ಟಿರುವದು, ನೀನು ಅತ್ಯುತ್ತಮನಾಗು, ಮತ್ತು ಸೋಲಿಗೆ ನಡಿಸಿದ ಯಶಸ್ಸಿನ ಕ್ರಮ,* ಎಂಬ ಆದರ್ಶ ಭೂತ ತಲೆಬರಹಗಳುಳ್ಳ ಪುಸ್ತಕಗಳಿವೆ. ಒತ್ತಡಗಳನ್ನೂ, ಆಯಾಸವನ್ನೂ, ಕೀಳಾದ ಮನೋಭಾವವನ್ನು ದುಖವನ್ನು, ಕಷ್ಟಕರವಾದ ಜನರನ್ನು ನಿಂದೆಯನ್ನು, ಭಯ ಮತ್ತು ಬೇಸಲಿಕೆಯನ್ನು ಎದುರಿಸುವ ವಿಧಾನಗಳನ್ನು ಆ ಪುಸ್ತಕಗಳು ತಿಳಿಸುತ್ತವೆಯೇ ಹೊರತು ಯಶಸ್ಸಿನ ಗುಟ್ಟನ್ನು ತಿಳಿಸಲು, ಯಾವುದೇ ಪುಸ್ತಕಗಳಿಲ್ಲ.

ಯಶಸ್ಸಿನ ವ್ಯವಹಾರಕ್ಕೆ ಮಾರ್ಗದರ್ಶನ, ಈ ದಿನದ ಕೊರತೆಯಾಗಿರುತ್ತದೆ. ಆಘಾತಗಳು ಸಂಭವಿಸುವಾಗ, ನಾವು ಎಚ್ಚರಗೊಂಡು ಉತ್ತಮವಾದದ್ದನ್ನೆ ಮಾಡುತ್ತೇವೆ. ಬಿರುಗಾಳಿಯು ಉಂಟಾಗುವಾಗ, ಪ್ರವಾಹದಿಂದ ಮನೆಗಳೂ, ಹೊಲಗಳು ನಾಶವಾಗು ವಾಗ, ನಮ್ಮ ನೆರೆಹೊರೆಯಲ್ಲಿ ಬೆಂಕಿ ಹತ್ತಿಕೊಳ್ಳುವಾಗ, ಅಲ್ಲಿ ತೊಂದರೆಗೀಡಾದ ಜನರ ಸುತ್ತಲೂ ಸೇರಿ, ಅವರಿಗಾಗಿ ಸಮಯ ಹಣ, ಶಕ್ತಿಯನ್ನು ಅರ್ಪಿಸಿಕೊಡುತ್ತೇವೆ, ಆದರೆ ಯಶಸ್ಸು ದೊರಕಿದಾಗ, ನಾವು ನಮ್ಮ ಸ್ನೇಹಿತರಿಗೆ ಪೈಪೋಟಿ ನೀಡುತ್ತೇವೆ, ಮತ್ತು ಜನರನ್ನು ಉಪಯೋಗಿಸಿಕೊಂಡು ಕರೆಯುತ್ತಾ, ಶಿಖರವನ್ನು ಏರುತ್ತೇವೆ. ನಂತರ ಜನರನ್ನು ಕೈ ಬಿಡುತ್ತೇವೆ.

ಯಶಸ್ಸು ಸಂಭವಿಸುವಾಗ ನಮ್ಮ ಯಥಾರ್ಥ ದೃಷ್ಯವನ್ನು ಕಳೆದು ಕೊಳ್ಳುತ್ತೇವೆ, ಪ್ರಪಂಚದ ಇತರೆ ಜನರಿಗಿಂತ ಶೇಖಡ 99 ರಷ್ಟು ಆರ್ಥಿಕ ವಿಷಯದಲ್ಲಿ ನಾವು ಮುಂದುವರೆ ದಿದ್ದರೂ ನಾವು ಅಮೇರಿಕದ ಆರ್ಥಿಕ ಪರಿಸ್ಥಿತಿಯ ಬಗ್ಗೆ ದೂರನ್ನು ಹೇಳುತ್ತೇವೆ. ನಾವು ಎಷ್ಟು ಕಷ್ಟಪಟ್ಟು ಕೆಲಸ ಮಾಡಬೇಕು ಎಂದು ದೂರುತ್ತೇವೆ. ಪಿತೃಗಳಿಗೆ ದೊರಕದ ಸಮಯವು ನಮಗೆ ದೊರಕಿದೆ, ನಮಗೆ ಹಣ ಸಮಯವು ದೊರೆತ ಪರಿಣಾಮದಿಂದ ನಾವು "ಶಿಖರದ ತುದಿಯನ್ನು ಮುಟ್ಟಿದ್ದೇವೆ," ಆದಾಗ್ಯು ನಮ್ಮಲ್ಲಿ ಅನೇಕರು "ಬುಡದಲ್ಲಿಯೇ ಇರುವವರಾ ಗಿದ್ದಾರೆ."

ಯಶಸ್ಸಿನ ಜೊತೆಯಲ್ಲಿ ಹೇಗೆ ಹೊಂದಾಣಿಕೆ ಮಾಡಿಕೊಳ್ಳೋಣ? ದಾವೀದನು ಯಶಸ್ಸನ್ನು ಹೊಂದಿದಂತೆ, ನಾವೂ ಸಹ ನಮ್ಮ ಆತ್ಮಗಳನ್ನು ನಾಶಮಾಡಿಕೊಳ್ಳದಂತೆ, ಯಶಸ್ಸನ್ನು ಸಾಧಿಸುವದಕ್ಕೆ ಕೆಲವು ಸಲಹೆಗಳನ್ನು ಪಡೆದುಕೊಳ್ಳೋಣ. ದಾವೀದನ ಮುಂದುಳಿದ ದಿನಗಳಲ್ಲಿ ಪಾಪದ ನೆರಳು ಅವನ ಮೇಲೆ ಬರುವ ಮೊದಲು ಇದ್ದ ಅವನ ಸಂತೋಷದ ದಿನಗಳ ಕುರಿತು ಧ್ಯಾನ ಮಾಡೋಣ.

ದಾವೀದನು ಸ್ಥಾಪಿಸಿದ ಸಾಮ್ರಾಜ್ಯದ ಕುರಿತು ಒತ್ತಿ ಹೇಳಲಾಗುವುದು. ಈ ಘಟನೆಗಳ

ಬಗ್ಗೆ ಹಗುರ ಆಲೋಚನೆ ಬೇಡ. ಯೆಹೋದ್ಯರಿಗೆ, ಸೊಲೊಮೋನನ ಆಡಳಿತ ಮೊದಲ ವರ್ಷಗಳು "ಇಸ್ರೇಲಿನ ಬಂಗಾರದ ಯುಗವಾಗಿತ್ತು." ಅದೇ ಸಮಯದಲ್ಲಿ, ಈ ಘಟನೆಗಳ ಬಗ್ಗೆ ಅತಿಯಾಗಿ ಒತ್ತಿ ಹೇಳುವುದು ಅನಾವಶ್ಯ. ಪೂರ್ತಿ ದೇಶವನ್ನು ವಶಪಡಿಸಿಕೊಂಡ ಬಗ್ಗೆ ಕೆಲವೇ ವಚನಗಳಲ್ಲಿ ವಿವರಿಸಲಾಗಿದೆ. ಇದಕ್ಕೆ ತದ್ವಿರುದ್ಧವಾಗಿ, ಇಡೀ ಅಧ್ಯಾಯದಲ್ಲಿ, ಮಂಜೂಷವನ್ನು ಯೆರೂಸಲೇಮಿಗೆ ಸಾಗಿಸುವಂಥ ಮತ್ತು ಇನ್ನೂ ಅನೇಕ ಆತ್ಮೀಕ ವಿಷಯಗಳ ಬಗ್ಗೆ ವಿವರಿಸಲಾಗಿದೆ.

ಏನೇ ಆದರು, ದಾವೀದನು *ಯಶಸ್ಸು* ಗಳಿಸಿದನು ಎಂಬ ಅಂಶ ಯಾವಾಗಲೂ ನೆನಪಿನಲ್ಲಿರುತ್ತದೆ - ದಾವೀದನು ಚತುರ ವೀರನಾಗಿ ಒಳ್ಳೆ ಆಡಳಿತ ನೀಡುವವನಾಗಿ, ಮತ್ತು ಅರಸನಾಗಿ ಯಶಸ್ಸು ಪಡೆದಿದ್ದನು. ಅವನ ಯಶಸ್ಸಿನ ದಾಖಲೆಗಳನ್ನು ಪುನರಾವರ್ತಿಸುವಾಗ - ಜೀವಿತವನ್ನು ಕಳಕೊಳ್ಳದೆ, ಶಿಖರವನ್ನು ಏರಲು ಅವನಿಗೆ ಸಹಾಯ ಮಾಡಿದ ಘಟನೆಗಳನ್ನು ನಮಗೆ ಸಹಾಯಕವಾಗುವಂತೆ ಆರಿಸಿಕೊಳ್ಳೋಣ.

## ದಾವೀದನು ಶಿಖರದ ತುದಿಯನ್ನು ಮುಟ್ಟಿದನು

2 ಸಮುವೇಲ 8-10 ಅರಸನಾದ ದಾವೀದನು ಮಾಡಿದ ಸಾಧನೆಗಳ ಉತ್ತುಂಗವನ್ನು ನೋಡುತ್ತೇವೆ. ಈ ಅಧ್ಯಾಯಗಳು ದಾವೀದನ ಅಶುಭ ದಿನಗಳ ಪ್ರಾರಂಭಕ್ಕೆ ನಾಂದಿಯಾಯಿತು.

### ಒಂದು ಸಾಮ್ರಾಜ್ಯವು ಸ್ಥಾಪನೆಯಾಯಿತು
### (2 ಸಮುವೇಲ 8; 21; 23; 1 ಪೂರ್ವಕಾಲವೃತ್ತಾಂತ 11; 18; 20)

2 ಸಮುವೇಲ 8ರಲ್ಲಿ ದಾವೀದನು ಯುದ್ಧದಲ್ಲಿ ಜಯಗಳಿಸಿದ ವಿಷಯದ ಬಗ್ಗೆ ಪೂರ್ಣ ಸಾರಾಂಶವಾಗಿದೆ. ಈ ಜಯಗಳ ಬಗ್ಗೆ ನಾವು ಓದುವಾಗ, ಮೂರು ಸಂಗತಿಗಳನ್ನು ಜ್ಞಾಪಿಸಿಕೊಳ್ಳಬೇಕಾಗುತ್ತದೆ: (1) ಹಲವಾರು ವರುಷಗಳ ಹಿಂದೆ ದೇವರು ಅಬ್ರಾಮನಿಗೆ ದೇಶದ ಕುರಿತಾಗಿ ಮಾಡಿದ ವಾಗ್ದಾನವನ್ನು ದಾವೀದನು ನೆರವೇರಿಸಿದನು (ಆದಿಕಾಂಡ 15:18-21). (2) ಯೆಹೋಶುವನು ಪ್ರಾರಂಭಿಸಿದ್ದನ್ನು ದಾವೀದನು ಅಂತ್ಯಗೊಳಿಸಿದನು (ಯೆಹೋಶುವ 1:4; 21:43). (3) ದೇವಾಲಯವನ್ನು ನಿರ್ಮಾಣ ಮಾಡುವ ಮೊದಲು, ದೇವರು ಹೇಳಿದ ಹಾಗೆ ಅವಶ್ಯವಾಗಿದ್ದ ಸಮಾಧಾನವನ್ನು ಸ್ಥಾಪನೆ ಮಾಡಿದ್ದನು.

*ಪಶ್ಚಿಮದ ಕಡೆಗೆ.* ಇಸ್ರಾಯೇಲ್ಯರ ಬದ್ಧ ವೈರಿಯಾಗಿದ್ದ ಫಿಲಿಷ್ಟಿಯರನ್ನು ವಶಪಡಿಸಿಕೊಳ್ಳುವದರ ಮೂಲಕ ಅವನ ಜಯದ ಪಟ್ಟಿ ಪ್ರಾರಂಭವಾಗುತ್ತದೆ (ಭೂಪಟವನ್ನು ನೋಡಿ). "ಅನಂತರ[1] ದಾವೀದನು ಹೋಗಿ ಫಿಲಿಷ್ಟಿಯರ ಮೇಲೆ ಬಿದ್ದು ಅವರನ್ನು ಸೋಲಿಸಿ ಅವರ ರಾಜಧಾನಿಯನ್ನು ತೆಗೆದುಕೊಂಡು[2] [ಅದು ಗತ್[3]] ಆಡಳಿತವನ್ನು ತನ್ನ ಸ್ವಾಧೀನದಲ್ಲಿಟ್ಟು ಕೊಂಡಿದ್ದನು" (2 ಸಮುವೇಲ 8:1).

ದಾವೀದನು ಫಿಲಿಷ್ಟಿಯರ ಮೇಲೆ ಅನೇಕ ಯುದ್ಧಗಳನ್ನು ಮಾಡಿದ್ದನು. ಅವನು, ಅವನ ನೆರೆಹೊರೆಯಲ್ಲಿ ಆದರ್ಶಭೂತವಾದ ಯುದ್ಧಗಳನ್ನು ಮಾಡಿದ್ದನು. ಅವುಗಳನ್ನು ಸಂಕ್ಷಿಪ್ತವಾಗಿ ಪರೀಕ್ಷಿಸೋಣ. ದಾವೀದನು ಕಿರೀಟ ಧರಿಸಿ ಇಸ್ರಾಯೇಲಿಗೆ ಅರಸನಾದ ಸಮಯದಲ್ಲಿ ಈಗಾಗಲೆ ಎರಡು ನಿರ್ಣಾಯಕ ಯುದ್ಧಗಳನ್ನು ಮಾಡಿದ್ದನು (2 ಸಮುವೇಲ 5). 2 ಸಮುವೇಲ ಕಡೆಯ ಅನುಬಂದದಲ್ಲಿ ದಾವೀದನು ಫಿಲಿಷ್ಟಿಯರೊಂದಿಗೆ ನಡೆಸಿದ ಅನೇಕ ಚಿಕ್ಕ ಹೋರಾಟಗಳ ಬಗ್ಗೆ ನೋಡುತ್ತೇವೆ.[4]

2 ಸಮುವೇಲ 21:15-22ರಲ್ಲಿ ನಾಲ್ಕು ಯುದ್ಧಗಳನ್ನು ನೋಡುತ್ತೇವೆ. ಅದರಲ್ಲಿ ಗೊಲ್ಯಾತನ ಸಂಬಂಧಿಗಳಲ್ಲಿ ನಾಲ್ಕು ಜನ ದೈತ್ಯರು ಇದ್ದರು. ಯುದ್ಧಗಳು ಮುಂದುವರಿಯುತ್ತಿದಂತೆ ದಾವೀದನು "ಬಲಹೀನನಾದನು" ("ಯಾಕೆ ಈ ಖಡ್ಗವು ಬಾರವಾದಂತಿದೆ? ಹಿಂದೆ

ಇದನ್ನು ನಾನು ತಿರುಗಿಸಿದ ಹಾಗೆ ಈಗ ಆಗುತ್ತಿಲ್ಲವಲ್ಲ? ನಾನು ವೃದ್ಧನಾಗಿಲ್ಲ ಇದು ನಿಶ್ಚಯ ಎಂಬುದಾಗಿ ದಾವೀದನು ತಿಳಿದನು ಎಂದು ನಾನು ಊಹಿಸುತ್ತೇನೆ") ರೆಫಾಯರಲ್ಲೊಬ್ಬನಾದ ಇಷ್ಬೀಬೆನೋಬ್ ಎಂಬುವನು ಫಿಲಿಷ್ಟಿಯನು, "ದೈತ್ಯರ ಸಂತಾನದವನಾಗಿದ್ದನು" (ವಚನ 16). ದಾವೀದನು ರಣರಂಗದಲ್ಲಿ ಆಯಾಸಗೊಂಡಿದ್ದನ್ನು ಕಂಡು "ದೈತ್ಯರನ್ನು ಕೊಂದವನನ್ನು" ಕೊಂದು ತಾನು ಹೆಸರುಗಳಿಸಬೇಕೆಂದು ತನ್ನ ಭಾರವಾದ ಭರ್ಜಿಯನ್ನು[5] ಹಳಿತವಾದ ಕತ್ತಿಯನ್ನೂ[6] ತೆಗೆದುಕೊಂಡು ಮುಂದಾದಾಗ ಯೋವಾಬನ ಸಹೋದರನು, ಅಪರಾಧ ಗಳಲ್ಲಿ ಪಾಲುಗಾರನೂ, ಯಾವಾಗಲೂ ಯಾರನ್ನಾದರೂ ಕೊಲ್ಲಬೇಕೆಂದಿದ್ದವನೂ[7] ಆದ ಅಬೀಷೈ ಈ ಘಟನೆಯನ್ನು, ನೋಡಿ, ತಕ್ಷಣವೇ ದಾವೀದನ ಸಹಾಯಕ್ಕೆ ಮುಂದಾದನು. ಈ ಸಮಯದಲ್ಲಿ ವೈರಿಯನ್ನು ಕೊಲ್ಲಲು ದಾವೀದನ ಅನುಮತಿಗಾಗಿ ಅವನು ಕಾಯದೇ ಆ ವೈರಿಯನ್ನು ಕೊಂದನು (ಅವನು ದಾವೀದನಿಗೆ ತೊಂದರೆ ಗೀಡು ಮಾಡುವ ವ್ಯಕ್ತಿಯಾಗಿದ್ದರೂ ಅವನು ಯಾಕೆ ಅವನ ಸಂಗಡ ಇವನನ್ನು ಇಟ್ಟುಕೊಂಡಿದ್ದರು ಎಂದು ಯೋಚಿಸೋಣ).

ಈ ಕಾರ್ಯ ದಾವೀದನ ಜನರನ್ನು ಗಾಬರಿಪಡಿಸಿತು, ಇನ್ನು ಮುಂದೆ ಅವನು ಯುದ್ಧ ಭೂಮಿಗೆ ಬಾರದೆ ಮನೆಯಲ್ಲಿಯೇ ಉಳಿಯಬೇಕೆಂದು ಅವನನ್ನು ಬೇಡಿ ಕೊಂಡರು. "ಆಗ ಜನರು ದಾವೀದನಿಗೆ - ಇಸ್ರಾಯೇಲ್ಯರ ದೀಪವು ಆರಿಹೋಗದಂತೆ ನೀನು ಇನ್ನು ಮುಂದೆ ನಮ್ಮ ಜೊತೆಯಲ್ಲಿ ಯುದ್ಧಕ್ಕೆ ಬರಬಾರದು ಎಂದು ಖಂಡಿತವಾಗಿ ಹೇಳಿದರು" (2 ಸಮುವೇಲ 21:17). ಈ ವಾಕ್ಯ ಭಾಗವು ಬಹುಶ ಪರಿಶುದ್ಧ ಸ್ಥಳದಲ್ಲಿ ಉರಿಯುತ್ತಿದ್ದ ಚಿನ್ನದ ದೀಪಸ್ತಂಭಕ್ಕೆ ಹೋಲಿಕೆಯಾಗಿರಬಹುದು. ಆ ಕತ್ತಲಾದ ಕೊಟ್ಟಡಿಗೆ ಇದರಿಂದ ಮಾತ್ರ ಪ್ರಕಾಶ ಉಂಟಾಗುತ್ತಿತ್ತು. ದಾವೀದನು ಇಸ್ರಾಯೇಲ್ ಜನಾಂಗಕ್ಕೆ ರಾಷ್ಟ್ರೀಯ ಸಂಪತ್ತಾಗಿದ್ದನು.

ಎರಡನೆಯ ಹೋರಾಟದಲ್ಲಿ ಇಸ್ರಾಯೇಲ್ಯರ ಸೈನಿಕನೊಬ್ಬನು "ದೈತ್ಯರಲ್ಲಿ ಇನ್ನೊಬ್ಬನನ್ನು ಸಾಯಿಸಿದನು" (ವಚನ 18). ಮೂರನೆಯ ಯುದ್ಧದಲ್ಲಿ ದಾವೀದನ "ರಣಶೂರನು"[8] ಗೊಲ್ಯಾತನ ಸಂಬಂದಿಯಲ್ಲಿ ಒಬ್ಬನಾದ ದೈತ್ಯನನ್ನು ಕೊಂದನು.[9] ನಾಲ್ಕನೆಯ ಯುದ್ಧದಲ್ಲಿ ಒಬ್ಬ ಎತ್ತರವಾದ ಪುರುಷನಿದ್ದನು. ಅವನ ಕೈಕಾಲುಗಳಿಗೆ ಆರಾರು ಬೆರಳುಗಳಂತೆ ಒಟ್ಟಿಗೆ ಇಪ್ಪತ್ನಾಲ್ಕು ಬೆರಳುಗಳಿದ್ದವು, ಅವನನ್ನು ದಾವೀದನ ಅಣ್ಣನ ಮಗನು ಸಾಯಿಸಿದನು (ವಚನಗಳು 20, 21).

2 ಸಮುವೇಲ 23ರಲ್ಲಿ ಫಿಲಿಷ್ಟಿಯರ ಜೊತೆ ಜರುಗಿದ ಯುದ್ಧಗಳಲ್ಲಿ ದಾವೀದನ "ಶೂರ ಭಟರ," "ಶೂರ ಕೃತ್ಯಗಳ" ಪಟ್ಟಿ ಮಾಡಲಾಗಿದೆ. ಉದಾರಣೆಗೆ ಒಂದು ಸಾರಿ ಫಿಲಿಷ್ಟಿಯರ ಸಂಗಡ ಹೋರಾಡುವ, ಒಬ್ಬನ ಹೊರತಾಗಿ ಎಲ್ಲಾ ಇಸ್ರಾಯೇಲ್ಯರು ಹಿಂದಕ್ಕೆ ಬಂದರು. ಅವನು ಹಿಂದಕ್ಕೆ ಬರಲು ನಿರಾಕರಿಸಿದನು. ಇಸ್ರಾಯೇಲ್ಯರು ಹೋದನಂತರ ಇವನು ನಿಂತು ಕತ್ತಿ ಹಿಡಿದು "ಕೈ ಸೋತು ಮರಗಟ್ಟಿ" ಹೋಗುವ ತನಕ ಫಿಲಿಷ್ಟಿಯರ ಕೊಲ್ಲುತ್ತಲೇ ಇದ್ದನು. "ಆ ದಿನದಲ್ಲಿ ಯೆಹೋವನು ಮಹಾಜಯವನ್ನುಂಟು ಮಾಡಿದನು" (ವಚನ 10). ಇನ್ನೊಂದು ಸಾರಿ, ಇಸ್ರಾಯೇಲ್ಯರು ಅವರ ಎದುರಿನಲ್ಲಿ ಓಡಿ ಹೋದಾಗ ಇವನು ಆ ಹೊಲದ ಮದ್ಯದಲ್ಲಿ ನಿಂತುಕೊಂಡು ಫಿಲಿಷ್ಟಿಯರನ್ನು ಕೊಂದು ಹೊಲವನ್ನು ಕಾಪಾಡಿದನು. "ಹೀಗೆ ಯೆಹೋ ವನು ಮಹಾಜಯವನ್ನುಂಟು ಮಾಡಿದನು" (ವಚನ 12).

ಫಿಲಿಷ್ಟಿಯರ ಸಂಗಡ ಯುದ್ಧ ಮಾಡುವಾಗ ಜರುಗಿದ ಒಂದು ಮನಕಲಕುವ ಘಟನೆಯನ್ನು ನಾವು ನೋಡುತ್ತೇವೆ. ಫಿಲಿಷ್ಟಿಯರು ಕಾವಲು ದಂಡನ್ನು ಬೇತ್ಲೆಹೇಮಿನಲ್ಲಿ ಇಟ್ಟಿದ್ದರು ದಾವೀದನು ಅವನ ಜನರು ಪಟ್ಟಣದ ಹೊರಗೆ ಬೀಡು ಬಿಟ್ಟಿದ್ದರು. ದಾವೀದನು ಬೇತ್ಲೆಹೇಮಿನ ಬಗ್ಗೆ ಭಾವನಾತ್ಮಕವಾದನು. ನಂತರ ಮಾತನಾಡಿ, "ಬೇತ್ಲೆಹೇಮ್ ಊರಿನ ಬಾಗಿಲ ಬಳಿಯಲ್ಲಿರುವ ಬಾವಿಯ ನೀರನ್ನು ಯಾರಾದರೂ ನನಗೆ ತಂದುಕೊಡುವದಾದರೆ ಎಷ್ಟೋ ಒಳ್ಳೇದು ಅಂದನು" (2 ಸಮುವೇಲ 23:15). ಅದು ಒಂದು ಕೋರಿಕೆಯಾಗಿರಲಿಲ್ಲ ತನ್ನ ಹಿಂದಿನ ದಿನಗಳಲ್ಲಿ ನೀರನ್ನು ಕುಡಿದಿದ್ದ ಅನುಭವವನ್ನು ನೆನಪುಮಾಡಿ ಆ ಹಳೆಯ

ಬಾವಿಯ ನೀರನ್ನು ಪುನ ಕುಡಿಯಬೇಕು ಎಂದು ಬಯಸಿದನು. ಈಗ ದಾವೀದನ ಸುತ್ತಲೂ ಅನೇಕ ಪ್ರೀತಿಪಾತ್ರರು ಇದ್ದರು. ಅವನ ಆಶೆ ಅವರಿಗೆ ಅಪ್ಪಣೆಯಾಯಿತು. ಅಲ್ಲಿದ್ದ ದಾವೀದನ "ಮೂರು ಜನ ಶೂರರು" ಫಿಲಿಷ್ಟಿಯರ ಪಾಳಯಕ್ಕೆ ನುಗ್ಗಿದರು ಮತ್ತು ಬಾವಿಯಿಂದ ನೀರನ್ನು ಸೇದಿ ಪಟ್ಟಣದ ಹೊರಕ್ಕೆ ಬಂದು ನೀರನ್ನು ಅವರ ಶಥಾಧಿಪತಿಗೆ ನೀಡಿದರು.

ಅವರು ಲೋಟದಲ್ಲಿ, ತುಂಬಿದ ನೀರನ್ನು ತಮ್ಮ ಕೈಯಲ್ಲಿ ಹಿಡಿದು, ಅರಸನ ಮುಂದೆ ಬಾಗಿ ನಿಂತಿದ್ದನ್ನು ನಾನು ನೋಡುತ್ತೇನೆ, ಅವರ ಬಟ್ಟೆಗಳು ಹರಿದು ಹೋಗಿವೆ, ಅವರ ದೇಹವು ರಕ್ತಸಿಕ್ತವಾಗಿದೆ, ಇದಕ್ಕೆ ಕಾರಣ ಅವರ ಪ್ರಿಯ ನಾಯಕನಿಗೆ ನೀರು ತರುವದೇ. ದಾವೀದನು ದುಖದಿಂದ ಆ ನೀರನ್ನು ತನ್ನ ಕೈಗೆ ತೆಗೆದುಕೊಂಡು ಈ ನೀರಿಗಾಗಿ ತಮ್ಮ ಜೀವಗಳನ್ನೇ ಪಣವಾಗಿಟ್ಟು ಬಂದ ತನ್ನ ಜನರನ್ನು ನೆನಪು ಮಾಡಿ, ಆ ನೀರನ್ನು ಕುಡಿಯಲು ನಿರಾಕರಿಸಿ ಅದನ್ನು ನೆಲದ ಮೇಲೆ ಹೊಯ್ದು ಯೆಹೋವನಿಗೆ ನೀರಿನ ಅರ್ಪಣೆಯನ್ನು ಮಾಡಿದನು. ಬಾಯಾರಿದ ಭೂಮಿಯು ನೀರನ್ನು ಹೀರಿ ಕೊಂಡಾಗ, "ಯೆಹೋವನೇ, ಈ ನೀರನ್ನು ಕುಡಿಯುವದು ನನಗೆ ದೂರವಾಗಿರಲಿ. ಇದು ಜೀವದಾಶೆ ತೊರೆದವರ ರಕ್ತ. ಇದನ್ನು ಕುಡಿಯುವದೇ ಇಲ್ಲ ಎಂದು ಹೇಳಿ ಅದನ್ನು ಯೆಹೋವನ ಮುಂದೆ ಹೊಯ್ದನು" (ವಚನ 17). ಈ ಪರಾಕ್ರಮಶಾಲಿಗಳಿಗೆ ದಾವೀದನು ನೀಡಿದ ಈ ಕಾಣಿಕೆಯನ್ನು ಬೇಗನೆ ಮರೆಯುವಂತಿಲ್ಲ.

ಫಿಲಿಷ್ಟಿಯರ ಮೇಲೆ ದಾವೀದನು ನಡೆಸಿದ ಯುದ್ಧಗಳ ಕುರಿತು ಕೆಲವು ಪದಗಳಲ್ಲಿ ಇರುವ ಸಾರಾಂಶವನ್ನು ತಿಳಿಯಬಹುದು "ಅನಂತರ ದಾವೀದನು ಹೋಗಿ ಫಿಲಿಷ್ಟಿಯರ ಮೇಲೆ ಬಿದ್ದು ಅವರನ್ನು ಸೋಲಿಸಿ ಅವರ ರಾಜಧಾನಿಯನ್ನು ತೆಗೆದುಕೊಂಡು ಆಡಳಿತವನ್ನು ತನ್ನ ಸ್ವಾಧೀನದಲ್ಲಿಟ್ಟುಕೊಂಡಿದ್ದನು" (2 ಸಮುವೇಲ 8:1). ದಾವೀದನು, ರಕ್ತವನ್ನೂ ಬೆವರನ್ನೂ ಮತ್ತು ಕಣ್ಣೀರನ್ನೂ ಸುರಿಸಿ ಕಟ್ಟಿದ ಸಾಮ್ರಾಜ್ಯವನ್ನು ಅದರ ಜಯದ ವಿಷಯವನ್ನು ನಮ್ಮ ಮನಸ್ಸಿನಲ್ಲಿ ಇಟ್ಟುಕೊಳ್ಳೋಣ. "ದಾವೀದನು ಫಿಲಿಷ್ಟಿಯರನ್ನು ಸೋಲಿಸಿ" ಅವರ ಮೇಲೆ ಆಡಳಿತ ನಡೆಸಿದ ವಿಷಯವು ದಾವೀದನು ಪಶ್ಚಿಮದಲ್ಲಿ ತನ್ನ ವೈರಿಗಳನ್ನು ವಶಪಡಿಸಿಕೊಂಡನು ಎಂದು ಸೂಚಿಸುತ್ತದೆ.

*ಪೂರ್ವಕ್ಕೆ.* ದಾವೀದನು ಪೂರ್ವ ಪ್ರದೇಶದಲ್ಲೂ ವೈರಿಗಳ ಮೇಲೆ ವಿಜಯ ಸಾಧಿಸಿದನು ಎಂದು 2 ಸಮುವೇಲ 8:2ರಲ್ಲಿ ನೋಡುತ್ತೇವೆ:

> ಇದಲ್ಲದೆ ಅವನು ಮೋವಾಬ್ಯರನ್ನು ಸೋಲಿಸಿ ಅವರನ್ನು ನೆಲಕ್ಕೆ ಹಾಕಿಸಿ ಹಗ್ಗದಿಂದ ಅಳತೆ ಮಾಡಿಸಿ ಎರಡು ಪಾಲು ಜನರನ್ನು ಕೊಲ್ಲಿಸಿ ಒಂದು ಪಾಲು ಉಳಿಸಿದನು. ಮೋವಾಬ್ಯರು ದಾವೀದನ ದಾಸರಾಗಿ ಅವನಿಗೆ ಕಪ್ಪಕೊಡಬೇಕಾಯಿತು.

ಮೋವಾಬ್ಯರು ಅಬ್ರಹಾಮನ ಸೋದರಳಿಯನಾದ ಲೋಟನ ವಂಶಸ್ಥರು.[10] ಮೋವಾಬ್ಯರು ಮುರಿಯಲ್ಪಟ್ಟ ದೇಶವನ್ನು ಹೊಂದಿದ್ದರು ಮತ್ತು (ಮೃತ ಸಮುದ್ರದ) ಉಪ್ಪಿನ ಸಮುದ್ರದ, ಪೂರ್ವ - ಮತ್ತು ದಕ್ಷಿಣಪೂರ್ವದ ಮರಳು ಗಾಡಿನ ಕಣಿವೆಯಲ್ಲಿದ್ದರು. ವಚನ ಎರಡರ, ಪ್ರಶ್ನೆಗೆ ಉತ್ತರಿಸಲಾಗದು, ಪ್ರೇರಿತವಾದ ದಾಖಲೆಗಳ ಪ್ರಕಾರ, ದಾವೀದನು ಮತ್ತು ಮೊವಾಬ್ಯರ ಸಂಬಂಧ ಒಳ್ಳೆಯ ಅಭಿಪ್ರಾಯದಿಂದ ಕೂಡಿತ್ತೇ. ದಾವೀದನು ಮೊವಾಬ್ಯರ ಸ್ತ್ರೀಯಾದ ರೂತಳ ಮರಿ - ಮೊಮ್ಮಗನು.[11] ಅವನು ತಪ್ಪಿಸಕೊಂಡು ಹೋದ ದಿವಸಗಳಲ್ಲಿ ತನ್ನ - ತಂದೆ ತಾಯಿಯ ಜವಾಬ್ದಾರಿಯನ್ನು ಮೋವಾಬ್ಯರ ಅರಸನಿಗೆ ಒಪ್ಪಿಸಿದನು.[12] ಆದರೂ ಸೋತು ಹೋಗಿದ್ದ ಮೋವಾಬ್ಯರನ್ನು ಇತರೆ ಜನಾಂಗದವರಿಗಿಂತ ಕ್ರೂರವಾಗಿ ನಡೆಸಿಕೊಂಡಿದ್ದನು,[13] ಮೂರು ಭಾಗದಲ್ಲಿ ಎರಡು ಭಾಗದಷ್ಟು ಮೋವಾಬ್ಯರನ್ನು ಕೊಂದಿದ್ದನು.[14] ದಾವೀದನು ಈ ರೀತಿ ನಡಕೊಳ್ಳಲು ಕಾರಣವೇನು? "ಮೋವಾಬ್ಯರ ಅರಸನ ಬಳಿಯಲ್ಲಿ ದಾವೀದನು ಸುರಕ್ಷೆಗಾಗಿ ಬಿಟ್ಟಿದ ಅವನ ತಂದೆ ತಾಯಿಗಳನ್ನು ಅವರು ಕೊಂದು ಹಾಕಿದ್ದ ಕಾರಣದಿಂದ, ದಾವೀದನು ಈ ರೀತಿ ಮಾಡಿದನು ಎಂದು ಯೆಹೋದ್ಯರ ಬರವಣಿಗೆ ತಿಳಿಸುತ್ತದೆ."[15] ಬಹುಶ

ಇದೇ ಕಾರಣವಿರಬಹುದು. ಅಥವಾ ಇಲ್ಲದೆ ಇರಬಹುದು. ಯಾಕೆಂದರೆ ದಾವೀದನ ಈ ಕೃತ್ಯಕ್ಕೆ ಬೇರೆ ಕಾರಣಗಳು ದೊರಕದೆ ಇರುವದರಿಂದ ಇದು ಸರಿ ಅಥವಾ ತಪ್ಪು ಎಂದು ನಿಶ್ಚಯಿಸಲಾಗದು.

ಉತ್ತರ ಮೋವಾಬಿನ, ಯೊರ್ದನ್ ಹೊಳಯ ಪಶ್ಚಿಮದ ಮರಳುಗಾಡಿನಲ್ಲಿ ವಾಸವಾಗಿದ್ದ ಅಮ್ಮೋನಿಯರನ್ನು[16] ಸಹ ಸೋಲಿಸಿದನು, ಮೋವಾಬಿನವರಂತೆ, ಅಮ್ಮೊನಿಯರೂ ಸಹ ಲೋಟನ ಸಂತಾನದವರಾಗಿದ್ದರು.[17] ಆದುದರಿಂದ ಪೂರ್ವದಲ್ಲಿದ್ದ, ಇಸ್ರಾಯೇಲ್ಯರ ವೈರಿಗಳ ಮೇಲೆ ಅಧಿಕಾರ ನಡೆಸಿದನು.

*ಉತ್ತರಕ್ಕೆ*. ಉತ್ತರದಲ್ಲಿ ದಾವೀದನಿಗೆ ದೊರಕಿರುವ ವಿಜಯದ ಕಡೆಗೆ ಈಗ ನಾವು ಗಮನ ಕೊಡೋಣ. "ದಾವೀದನು ಯೂಫ್ರೇಟೀಸ್ ನದಿಯ ಸುತ್ತಣ ಪ್ರದೇಶದಲ್ಲಿ ತನ್ನ ರಾಜ್ಯಾಧಿಕಾರವನ್ನು ಸ್ಥಾಪಿಸುವದಕ್ಕೆ ಹೋಗುತ್ತಿದ್ದ ರೆಹೋಬನ ಮಗನೂ ಚೋಬದ ಅರಸನೂ ಆದ ಹದದೆಜೆರನನ್ನು ಸೋಲಿಸಿದನು" ಎಂದು 2 ಸಮುವೇಲ 8:3 ಹೇಳುತ್ತದೆ. ಚೋಬವು ದಮಸ್ಕಸ್ ಉತ್ತರದಲ್ಲಿ, ಬೆಟ್ಟದ ಪ್ರದೇಶವಾಗಿತ್ತು, ಮತ್ತು ಸಿರಿಯಾದ ಒಂದು ಪ್ರದೇಶವು ಸಹ ಆಗಿತ್ತು. ಚೋಬದ ಅರಸನು ಯೂಫ್ರೇಟೀಸ್ ಹೊಳೆಯ ತೀರದ ಪ್ರದೇಶವನ್ನು ಪುನ ಹಿಂದಕ್ಕೆ ಪಡೆಯಲು ಯುದ್ಧ ಮಾಡುತ್ತಿರುವಾಗ ದಾವೀದನು ಹಿಂದಿನಿಂದ ಹೋಗಿ ಅವರ ಮೇಲೆ ಯುದ್ಧ ಮಾಡಲು ಅವನಿಗೆ ಮಹಾಜಯವುಂಟಾಯಿತು. ಅದರಲ್ಲಿ 21,700 ಜನರನ್ನು ಖೈದಿಗಳನ್ನಾಗಿ ತೆಗೆದುಕೊಂಡು ಹೋದನು.[18] ಅದರ ಜೊತೆಯಲ್ಲಿ ಅನೇಕ ಕುದುರೆಗಳನ್ನೂ ರಥಗಳನ್ನೂ ಸಹ ವಶಪಡಿಸಿಕೊಂಡನು.[19]

ಈ ಒಂದು ದಾವೀದನ ಯುದ್ಧದ ಜಯವು ಅವರ ರಾಜಧಾನಿಯ ಬಳಿಯಲ್ಲೆ ನಡೆದದ್ದರಿಂದ, ಧಮಸ್ಕಸ್ ಸಿರಿಯನ್ನರು[20] ಗಾಬರಿಗೊಂಡರು. ಮತ್ತು ಅರಸನಾದ ಚೋಬನ ಬಳಿ ಸಹಾಯಕ್ಕಾಗಿ ಹೋದರು. ಇದು ಅವರು ಮಾಡಿದ ಬೆಲೆಯುಳ್ಳ ತಪ್ಪಾಗಿತ್ತು. ದಾವೀದನು ಸಿರಿಯನ್ನರಲ್ಲಿ 22,000 ಸಾವಿರ ಜನರನ್ನು ಕೊಂದು ಮಿಕ್ಕಿದವರನ್ನು ಇಸ್ರಾಯೇಲ್ಯರಿಗೆ ಸಾಮಂತರನ್ನಾಗಿ ಮಾಡಿದನು. ಉತ್ತರದ ಯೂಫ್ರೇಟೀಸ್ ನದಿಯವರೆಗೂ ದಾವೀದನು ತನ್ನ ಸಾಮ್ರಾಜ್ಯವನ್ನು ವಿಸ್ತರಿಸಿದನು.

2 ಸಮುವೇಲ 8:6 ಕಡೆಯ ಭಾಗದಲ್ಲಿ ದಾವೀದನು ಹೇಗೆ ಈ ಜಯವನ್ನು ಸಾಧಿಸಿದನು ಎಂದು ಒತ್ತಿ ಹೇಳಲಾಗಿದೆ, ದಾವೀದನ ಪಳಗಿದ, ಯುದ್ಧದ ಯುಕ್ತಿಯೂ, ಆತನ ನಾಯಕರ ಧೈರ್ಯವೂ, ಅವನ ಶೂರರ ಹೋರಾಟದ ಆಯುಧಗಳೂ ಮಾತ್ರ ಅವನ ಜಯಕ್ಕೆ ಮೂಲವಾಗಿರಲಿಲ್ಲ, ದಾವೀದನು ಹೋದಲ್ಲೆಲ್ಲಾ, "*ದೇವರು* ಅವನಿಗೆ ಸಹಾಯಕನಾಗಿ ಇದ್ದುದರಿಂದ, ಅವನಿಗೆ ಗುರುತರವಾದ ಯಶಸ್ಸು ದೊರೆಯಿತು." (ಒತ್ತಿ ಹೇಳಿದ್ದು ನನ್ನದು.) ಈ ವಿಷಯವನ್ನು ಮನದಟ್ಟು ಮಾಡಿಕೊಳ್ಳಿ. ಇದು ನಮ್ಮ ಪಠ್ಯ ಭಾಗದ ಮುಖ್ಯ ಪ್ರಸ್ತಾಪವಾಗಿರುತ್ತದೆ.

ಯಾರಿಗೆ ಯಾವ ಪ್ರತಿಫಲ ನೀಡಬೇಕು ಎಂದು ದಾವೀದನಿಗೆ ತಿಳಿದಿದ್ದರಿಂದ ದಾವೀದನು ತಾನು ಜಯಹೊಂದಿದ ಸ್ಥಳದಲ್ಲಿ ದೊರಕಿದ ಕೊಳ್ಳೆಯನ್ನು ಯೆರೂಸಲೇಮಿಗೆ ತೆಗೆದು ಕೊಂಡು ಹೋದನು, ಅದರಲ್ಲಿ ಚಿನ್ನದ ಗುರಾಣಿಗಳೂ ಮತ್ತು ಬಹಳಷ್ಟು ಕಂಚುಗಳು ಸಹ ಸೇರಿದ್ದವು. "ಅವನು ಅವುಗಳನ್ನು ದೇವರಿಗೆ ಪ್ರತಿಷ್ಠಿಸಿದನು" (2 ಸಮುವೇಲ 8:11). ಅವನ ಕೊಳ್ಳೆಯಲ್ಲಿ ಬಹುಪಾಲನ್ನು ದೇವಾಲಯದ ಉಪಯೋಗಕ್ಕೆ ನೀಡಿದನು.[21]

ಪ್ರಪಂಚದ ಐಶ್ವರ್ಯವು ದಾವೀದನ ಕಡೆಗೆ ಹರಿಯಲು ಪ್ರಾರಂಭವಾಯಿತು. ಅರಸನಾದ ದಾವೀದನು ತನ್ನ ಬದ್ಧ ವೈರಿಯಾದ ಚೋಬನನ್ನು ಸಂಹಾರ ಮಾಡಿದ ವಿಷಯವನ್ನು ಹಮಾತಿನ[22] ಅರಸನು ಕೇಳಿ, ದಾವೀದನಿಗೆ ಕಂಚು ಚಿನ್ನ, ಬೆಳ್ಳಿಯ, ಉಡುಗೊರೆಗಳನ್ನು ಕಳುಹಿಸಿದನು.[23] ಸಿರಿಯಾ, ಮೋವಾಬ್, ಅಮ್ಮೋನ್ಯ, ಅಮಾಲೇಕ್ಯ,[24] ಫಿಲಿಷ್ಟಿಯರು, ಹಾಗೂ ಚೋಬ, ಪ್ರಾಂತ್ಯಗಳ ಮೇಲೆ ದಾವೀದನು ಜಯಗಳಿಸಿದ್ದರಿಂದ,

ದಾವೀದನಿಗೆ ಇವುಗಳಿಂದ ಹೆಚ್ಚಾದ ಅಮೂಲ್ಯ ವಸ್ತುಗಳು ದೊರಕಿದವು. (ನಂತರ ದಾವೀದನು ಸೊಲೊಮೋನನಿಗೆ ದೇವಾಲಯಕ್ಕಾಗಿ 100,000 ತಲಾಂತು ಬಂಗಾರ, 1,000,000, ತಲಾಂತು ಬೆಳ್ಳಿ![25]ಯನ್ನು ಶೇಖರಣೆ ಮಾಡಿಟ್ಟಿರುವದನ್ನು ತಿಳಿಸಿದನು. ಇದನ್ನು ನಾನು ಬರೆ ಯುವಾಗ ಅಮೇರಿಕದ ಖರ್ಚುವ್ಯಚ್ಚದಲ್ಲಿ $300 ಬಿಲಿಯನ್ ಡಾಲರ್ ಕೊರತೆ ಉಂಟಾಗಿದೆ. ಆದರೆ ದಾವೀದನು ಹೆಚ್ಚು ಕಡಿಮೆ $100 ಬಿಲಿಯನ್ ಡಾಲರ್ ಹಣವನ್ನು ರಾಷ್ಟ್ರೀಯ *ಉಳಿತಾಯವನ್ನಾಗಿ* ಮಾಡಿದ್ದನು!)

*ದಕ್ಷಿಣಕ್ಕೆ.* ದಾವೀದನು ಪಶ್ಚಿಮ, ಪರ್ವ, ಮತ್ತು ಉತ್ತರದವರೆಗೆ ತನ್ನ ಸಾಮ್ರಾಜ್ಯವನ್ನು ವಿಸ್ತರಿಸಿಕೊಂಡಿದ್ದನು. ಈಗ ನಾವು ನಮ್ಮ ದೃಷ್ಟಿಯನ್ನು ದಕ್ಷಿಣದ, ಎದೋಮಿನ ಕಡೆಗೆ ತಿರುಗಿಸೋಣ. ಎರಡನೆಯ ಸಮುವೇಲ 8:13ರಲ್ಲಿ "ಇದಲ್ಲದೆ ದಾವೀದನು ಪ್ರಖ್ಯಾತನಾಗಲೂ ಹೋಗಿ ಉಪ್ಪಿನ ತಗ್ಗಿನಲ್ಲಿ[26] ಎದೋಮ್ಯರ 18,000 ಸೈನಿಕರನ್ನು ಹೊಡೆದು ಬಂದು ಅಂದಿನಿಂದ ಬಹು ಖ್ಯಾತಿವಂತನಾದನು." ಉಪ್ಪಿನ ತಗ್ಗು ಉಪ್ಪಿನ ಸಮುದ್ರ (ಮೃತ ಸಮುದ್ರ)ದ ದಕ್ಷಿಣಕ್ಕೆ ಇದ್ದದ್ದರಿಂದ ಇದಕ್ಕೆ ಅನುಕೂಲವಾಗುವ 1 ಪೂರ್ವಕಾಲ ವೃತ್ತಾಂತ 18:12ನೇ ವಾಕ್ಯವನ್ನು "ಎದೋಮ್ಯರು" ಎಂದು ಬರೆಯಲ್ಪಟ್ಟಿರುವದು ಬಹುಶ (ಸಿರಿಯದ)[27] ಅರಾಮ್ಯರ ಬದಲಾಗಿ ಬರೆಯಲ್ಪಟ್ಟಿರಬಹುದು. ಎದೋಮ್ಯರ ಮೇಲೆ ದಾವೀದನು ಜಯ ಸಾಧಿಸಿದ್ದರಿಂದ ಅಕೂಬ ಕೊಲ್ಲಿಗೆ ಮಾರ್ಗ ಸರಾವಾಯಿತು, ಇದು ದಕ್ಷಿಣ ವ್ಯಾಪಾರ ಮಾರ್ಗವಾಯಿತು.

2 ಸಮುವೇಲ 8:14ರಲ್ಲಿ ಪ್ರಾಮುಖ್ಯವಾದ ಮಾತು ಕಾಣಿಸಿಕೊಳ್ಳುತ್ತದೆ: "ಯೆಹೋವನ ಅನುಗ್ರಹದಿಂದ ದಾವೀದನಿಗೆ ಎಲ್ಲಿ ಹೋದರೂ ಜಯವುಂಟಾಯಿತು." ಕೀರ್ತನೆ 60 ಈ ಸತ್ಯದ ಕುರಿತ ವಿವರಣೆಯಾಗಿರುತ್ತದೆ. ಉಪ್ಪಿನ ತಗ್ಗಿನಲ್ಲಿ[28] ನಡೆದ ಯುದ್ಧದ ಪ್ರಾರಂಭದ ದಿವಸಗಳಲ್ಲಿ ಇದನ್ನು ಬರೆಯಲಾಗಿದೆ. ಎದೋಮಿನ ಸಂಗಡ ಯುದ್ಧವು ಸರಿಯಾಗಿ ನಡೆಯದ ಸಮಯದಲ್ಲಿ ಈ ಮಾತು ಬರೆಯಲ್ಪಟ್ಟಿತು. "ದೇವರೇ ಕೋಪದಿಂದ ನಮ್ಮನ್ನು ತಳ್ಳಿ ಕೆಡವಿ ಬಿಟ್ಟಿದ್ದೀ; ನಮ್ಮನ್ನು ಎತ್ತಿ ನಿಲ್ಲಿಸು" (ವಚನ 1) "ಕೊಳ್ಳೆ ಹೊಡೆದ ನಗರಕ್ಕೆ ನನ್ನನ್ನು ಕರೆ ದುಕೊಂಡು ಹೋಗುವವರು ಯಾರು? ಎದೋಮ್ ಪ್ರಾಂತದೊಳಗೆ ನನ್ನನ್ನು ಸೇರಿಸುವವರು ಯಾರು?" (ವಚನ 9) ಎಂದು ದಾವೀದನು ಕೇಳಿ ತನ್ನ ಪ್ರಶ್ನೆಗೆ ತಾನೇ ಉತ್ತರ ನೀಡಿದ್ದಾನೆ. "ದೇವರಿಂದ ಶೂರ ಕೃತ್ಯಗಳನ್ನು ನಡಿಸುವವು; ನಮ್ಮ ವೈರಿಗಳನ್ನು ತುಳಿದು ಬಿಡುವವನು ಆತನೇ" (ವಚನ 12). ತನಗೆ ಜಯ ಅನುಗ್ರಹಿಸಿದವನನ್ನು ದಾವೀದನು ಎಂದಿಗೂ ಮರೆ ಯಲಿಲ್ಲ.

**ರಾಜ್ಯದ ಸಂಘಟನೆ (2 ಸಮುವೇಲ 8; 1 ಪೂರ್ವಕಾಲವೃತ್ತಾಂತ 23-27)**

2 ಸಮುವೇಲ 8ರ ಕಡೆಯ ಭಾಗ ದಾವೀದನ ಆಳ್ವಿಕೆಯು ಸಾರಾಂಶವಾಗಿದೆ. "ದಾವೀದನು ಇಸ್ರಾಯೇಲ್ಯರೆಲ್ಲರ ಅರಸನಾಗಿ ಎಲ್ಲಾ ಪ್ರಜೆಗಳಿಗೂ ಧರ್ಮತಪ್ಪದೆ ನ್ಯಾಯತೀರಿಸು ತ್ತಿದ್ದನು" (ವಚನ 15). ರಾಜ್ಯದ ಇತರರು ನ್ಯಾಯಾಧಿಪತಿಗಳಾಗಿದ್ದರೂ, ಅರಸನೇ ಅಂತ್ಯದ ನ್ಯಾಯಾಲಯವಾಗಿದ್ದನು. ಯಾಕೆಂದರೆ ಅವನು ದೇವರನ್ನು ಪ್ರತಿನಿಧಿಸುತ್ತಿದ್ದರಿಂದ ಅರಸನು ಬೇಧ - ಬಾವವಿಲ್ಲದೆ ಕಾರ್ಯ ನಿರ್ವಹಿಸಬೇಕಾಗಿತ್ತು.[29]

ಎರಡು ಸಮುವೇಲ 8:16-18ರಲ್ಲಿ, ದಾವೀದನು ಉತ್ತಮ ಆಡಳಿತಗಾರನಾಗಿದ್ದು ಯಾರಿಗೆ, ಯಾವ ಅಧಿಕಾರ ನೀಡಬೇಕು ಎಂದು ತಿಳಿದವನಾಗಿದ್ದನು. ಯೋವಾ ಬನು ಸೇನಾಪತಿಯಾಗಿದ್ದನು, ದಾವೀದನು "ಲೇಖಕನನ್ನು" ಹೊಂದಿದ್ದನು. ಅವನು ಅರಸನಿಗೂ ಮತ್ತು ಜನರಿಗೂ ಮಧ್ಯದಲ್ಲಿ ನಡೆಯುವ ಹಾಗೂ ಹೋಗಳುವ ಕುರಿತು ಸಂಪರ್ಕ ಏರ್ಪಡಿಸುವವನಾಗಿದ್ದನು. ಚಾದೋಕನೂ ಅಹೀಮೆಲೆಕನೂ ಯಾಜಕರಾ ಗಿದ್ದರು (ಸಾಮಾನ್ಯವಾಗಿ ಇಸ್ರಾಯೇಲ್ಯರು ಎರಡು ಜನ ಮಹಾ ಯಾಜಕರನ್ನು

ಹೊಂದಿದ್ದರು; ಗಿಬೆಯದ[30] ಗುಡಾರದಲ್ಲಿ ಚಾದೋಕನು ಇದ್ದನು, ಬಹುಶ ಯೆರೂಸಲೇಮಿನ[31] ದೇವಮಂಜೂಷದ ಬಳಿಯಿದ್ದ ಅಹಿಮೇಲೇಕನ ಜೊತೆಯಲ್ಲಿಯೂ ಇರಬಹುದು). ಫಿಲಿಷ್ಟಿಯರಿಂದಲೂ[32] ಕ್ರೇಟೆ[33] ದ್ವೀಪದಿಂದಲೂ, ಸಂಭಳಕ್ಕಾಗಿ ದುಡಿಯಲು ಬಂದಂತ "ರಣಶೂರರು"[34] ದಾವೀದನಿಗೆ ವ್ಯಯಕ್ತಿಕ ಬೆಂಗಾವಲಿನವರಾಗಿದ್ದರು. ರಾಜ್ಯದ ಅಧಿಕೃತ ದಾಖಲೆಗಳನ್ನು ದಾಖಲಿಸುವ ಮತ್ತು ಸುರಕ್ಷಿತವಾಗಿರುವ ಜ್ಞಾನಿಯಾದ ಬರಹಗಾರನನ್ನು ಹೊಂದಿದ್ದನು. ದಾವೀದನು ತನ್ನ ಮಕ್ಕಳನ್ನು ಸಹ, ಆಡಳಿತದಲ್ಲಿ ಸೇರಿಸಿಕೊಂಡಿದ್ದನು. ಎರಡು ಸಮುವೇಲ 8:18 ಕಾವಲುದಂಡುಗಳ "ಮುಖ್ಯಸ್ಥರು" 1 ಪೂರ್ವಕಾಲವೃತ್ತಾಂತ 18:17 ಅರಸನ ಒಡ್ಡೋಲಗದಲ್ಲಿ "ಪ್ರಧಾನರಾಗಿದ್ದರು."[35]

1 ಪೂರ್ವಕಾಲವೃತ್ತಾಂತ 23-27ರವರೆಗೆ ಬರೆದಿರುವ ವಾಕ್ಯವನ್ನು ಗಮನಿಸಿದರೆ ದಾವೀದನ ಎಂಥಾ ಅದ್ಭುತಕರವಾದ ಸಂಘಟಕರು ಆಗಿದ್ದನು ಎಂದು ತಿಳಿದು ಬರುತ್ತದೆ. ಧಾರ್ಮಿಕ ಸೇವೆಗಾಗಿ ಲೇವಿಯರನ್ನು ನೇಮಿಸಿದನು (ಅಧ್ಯಾಯ 23-26), ಯುದ್ಧ ಸನ್ನದ್ಧರಾಗಿರುವ ಸೇನೆಯನ್ನು ಸಹ ಸಂಘಟಿಸಿದ್ದನು (27:1-24). ವ್ಯವಸಾಯವು ಬಹಳ ಅವಶ್ಯವಾಗಿದ್ದರಿಂದ ಅದರ ಜವಾಬ್ದಾರಿಯನ್ನು ಸಹ ದಾವೀದನು ಕೆಲವರಿಗೆ ನೀಡಿದನು (27:25-31). ಅವನಿಗೆ ಅವಶ್ಯವಿದ್ದ ಸಮಾಲೋಚಕರನ್ನು ರಾಜವೈಭವದ ಬೋಧಕರನ್ನೂ ನೇಮಿಸಿಕೊಂಡನು. ಅವನೊಂದಿಗಿದ್ದ ಇನ್ನು ಕೆಲವರ ವಿಷಯವನ್ನು ಈ ಅಧ್ಯಾಯದ ಅಂತ್ಯ ಪಟ್ಟಿಯಲ್ಲಿ ಗಮನಿಸುತ್ತೇವೆ (27:32-34). ಯಶಸ್ಸನ್ನು ಬಯಸುವ ನಾಯಕರುಗಳು ಎಲ್ಲಾ ವಿಷಯದಲ್ಲೂ ಕುಲಾಂಕುಶ ಪರೀಶೀಲನೇ ಮಾಡುತ್ತಾರೆ.

**ವಾಗ್ದಾನವನ್ನು ನೆರವೇರಿಸಿದನು (2 ಸಮುವೇಲ 9)**

"ದಾವೀದನ ಜೀವಿತದಲ್ಲಿ ನಡೆದ ಸುಂದರವಾದ ಹಾಗೂ ಮನಕಲಕುವಂಥ ಒಂದು ಘಟನೆಯನ್ನು"[36] 2 ಸಮುವೇಲ 9ರಲ್ಲಿ ನಾವು ನೋಡುತ್ತೇವೆ. ಇಲ್ಲಿ ದಾವೀದನು - ಮತ್ತು ಯೋನಾತಾನನ ನಡುವೆ ಇದ್ದ ಸ್ನೇಹದ ಸಂಧರ್ಭವನ್ನು ಗಮನಿಸುತ್ತೇವೆ.

ದಾವೀದನು ಇಸ್ರಾಯೇಲ್ಯರ, ಕಿರೀಟ ಹೊಂದಿದ ಅರಸನಾಗಿ ಹತ್ತು ವರ್ಷಗಳು ದಾಟಿದ್ದವು. ಈಗ ಅವನು ತನ್ನ ಸಾಮ್ರಾಜ್ಯವನ್ನು ಸ್ಥಾಪಿಸಿ ಸುಭಿಕ್ಷ ಪಡಿಸಿದನು; ಆತನ ಆಳ್ವಿಕೆಯು ಸಂಘಟನೆಗೊಂಡು ಕಾರ್ಯನಿರ್ವಹಿಸುತ್ತಿತ್ತು. ಈಗ ಅವನಿಗೆ ಹಿಂದಿನದನ್ನು ನೆನಪು ಮಾಡಿಕೊಳ್ಳುವದಕ್ಕೆ ಸಮಯವಿತ್ತು. ಆಗ ಅವನ ಯೋಜನೆ, ಯುದ್ಧವೀರನೂ ಇಸ್ರಾಯೇಲಿನ ರಾಜಕುಮಾರನೂ, ನಿಸ್ವಾರ್ಥದ ಮಮತೆಯನ್ನು ತೋರಿಸಿದ ಅವನ ಸ್ನೇಹಿತನಾದ ಯೋನಾತಾನನಿಗೆ ಇಪ್ಪತ್ತು ವರ್ಷಗಳ ಹಿಂದೆ ಮಾಡಿದ ವಾಗ್ದಾನವನ್ನು ದಾವೀದನು ನೆನಪು ಮಾಡಿಕೊಂಡನು. ದಾವೀದನು ತನ್ನ ಜೀವಕ್ಕಾಗಿ ತಪ್ಪಿಸಿಕೊಂಡು ಹೋಗುವ ಮುನ್ನ ಯೌವನಸ್ಥನಾದ ರಾಜಕುಮಾರನಾದ ಯೋನಾತಾನನು ಹೊಲದಲ್ಲಿ ನಿಂತುಕೊಂಡವನಾಗಿ ದಾವೀದನ ಬಳಿ ಒಂದು ವ್ಯಯಕ್ತಿಕವಾದ ಕೋರಿಕೆಯನ್ನಿಟ್ಟಿದ್ದನು. ಅದೇನೆಂದರೆ, "ನೀನು ರಾಜನಾದಾಗ ಯೆಹೋವನನ್ನು ನೆನಸಿ ನನ್ನ ಜೀವಮಾನದಲ್ಲೆಲ್ಲಾ ನನಗೆ ಕೃಪೆ ತೋರಿಸು. ನಾನು ಸತ್ತನಂತರ ನನ್ನ ಮನೆಯ ಮೇಲೆಯೂ ಶಾಶ್ವತವಾಗಿ ನಿನ್ನ ದಯವಿರಲಿ. ಯೆಹೋವ ನನ್ನೂ ನಿನ್ನ ಎಲ್ಲಾ ಶತ್ರುಗಳನ್ನು ಭೂಮಿಯಿಂದ ತೆಗೆದು ಹಾಕಿದ ಮೇಲಾದರೂ ಅದು ನನ್ನ ಮನೆಯಿಂದ ಅಗಲದಿರಲಿ ಅಂದಾಗ" (1 ಸಮುವೇಲ 20:14, 15). ದಾವೀದನು ಯಾವಾಗಲೂ ಯೋನಾತಾನನಿಗೂ ಅವನ ಕುಟುಂಬಕ್ಕೂ ದಯೆಯನ್ನು ತೋರಿಸುವೆನೆಂದು ಪ್ರಮಾಣ ಮಾಡಿದನು (1 ಸಮುವೇಲ 20:17).

ಈಗ ದಾವೀದನು ಮಾಡಿದ ವಾಗ್ದಾನವನ್ನು ನೆರವೇರಿಸುವ ಸಮಯ ಬಂದಿತ್ತು ಆದರೆ ಈಗ ಯೋನಾತಾನನು ಜೀವದಿಂದ ಇರಲಿಲ್ಲ. ಅವನು ಗಿಲ್ಬೋವ ಬೆಟ್ಟದಲ್ಲಿ ಫಿಲಿಷ್ಟಿಯರ ಬಾಣಗಳ ಮಳೆಗೆ ತುತ್ತಾಗಿದ್ದನು. ಆದಾಗ್ಯೂ ದಾವೀದನು ಯೋನಾತಾನನ ಕುಟುಂಬದಲ್ಲಿ

ಸಾಯದೆ ಬದುಕಿದ್ದವರಿಗೆ ಕೃಪೆಯನ್ನು ತೋರಿಸಲು ಮುಂದಾದನು.

ಈಗ ಅವರನ್ನು ಕಂಡು ಹಿಡಿಯುವುದು ಹೇಗೆ? ಪೂರ್ವಕಾಲದ ಅರಸರುಗಳು ಸಿಂಹಾಸನಕ್ಕಾಗಿ ಹೋರಾಡಬಹುದಾದ ಜನರನ್ನು ಸಾಮಾನ್ಯವಾಗಿ ಹೊರಹಾಕುತ್ತಿದ್ದರು. ಅಂಥ ಅರಸರ ಸಂಭಂಧಿಕರುಗಳು ತಮ್ಮನ್ನು ಸಾಮಾನ್ಯರು ಎಂದು ತೋರ್ಪಡಿಸಿ ಕೊಳ್ಳುತ್ತಿದ್ದರು. ಆದುದರಿಂದ "ದಾವೀದನು - ಸೌಲನ ಮನೆಯವರಲ್ಲಿ ಯಾರಾದರೂ ಉಳಿದಿರುತ್ತಾರೋ? ನಾನು ಅವರಿಗೆ ಯೋನಾತಾನನ ಸಲುವಾಗಿ ದಯೆತೋರಿಸುವೆನು" ಅಂದನು (2 ಸಮುವೇಲ 9:1). ದಾವೀದನ ಮನೆಯಲ್ಲಿಯೇ ಸೌಲನ ಮಗಳಾದ - ಮೀಕಲಳು ಇದ್ದಳು. ಆದರೆ ಅವಳು (ದಾವೀದ ನನ್ನು ತಿರಸ್ಕರಿಸಿದ್ದರಿಂದ) ತನ್ನ ಕುಟುಂಬದವರು ಇರುವಂಥ ಸ್ಥಳವನ್ನು ಒಂದು ವೇಳೆ ಹೇಳದಿದ್ದರೆ ಅದನ್ನು ಅವನಿಗೆ ತಿಳಿಸಲು ಅಸಾಧ್ಯವಾಗಿತ್ತು, ನಂತರ ಸೌಲನ ಮನೆಯಲ್ಲಿ ದಾಸನಾಗಿದ್ದ ಚೀಬನೆಂಬ ಒಬ್ಬ ಮನುಷ್ಯನನ್ನು ಕಂಡು, "ದಾವೀದನು ಅವನಿಗೆ ಸೌಲನ ಕುಟುಂಬದವರಲ್ಲಿ ಯಾರಾದರೂ ಉಳಿದಿದ್ದರೆ ಹೇಳು ನಾನು ದೇವರನ್ನು ನೆನೆಸಿ ಅವರಿಗೆ ದಯೆ ತೋರಿಸುವೆನು ಅಂದನು." "ಆಗ ಚೀಬನು ಅರಸನಿಗೆ ಯೋನಾತಾನನಿಗೆ ಎರಡು ಕಾಲೂ ಕುಂಟಾದ ಒಬ್ಬ ಮಗನಿರುತ್ತಾನೆ ಎಂದು ಹೇಳಿದನು" (2 ಸಮುವೇಲ 9:3).[37]

ಈ ಮಗನ ಹೆಸರು ಮೆಫೀಬೋಶೆತನು (ಮೆರಿಬಾಲ್[38]). ಅವನು ಐದು ವರ್ಷದವನಾಗಿದ್ದಾಗ,[39] ಅವನ ತಂದೆ ಮತ್ತು ಅಜ್ಜ ಇಬ್ಬರೂ ಮರಣ ಹೊಂದಿದ್ದರು. ಮೆಫೀಬೋಶೆತನ ದಾದಿಯು, ಯೋನಾತಾನನ ಹಾಗೂ ಸೌಲನ ಮರಣದ ಸುದ್ದಿಯನ್ನು ಕೇಳಿ, ಭಯಗೊಂಡವಳಾಗಿ ಫಿಲಿಷ್ಟಿಯರು ಅವರನ್ನು ಕೊಲ್ಲಬಹುದು ಅಥವಾ ಇಸ್ರಾಯೇಲ್ಯರ ನೂತನ ಅರಸನು ಅವರನ್ನು ಕೊಲ್ಲಬಹುದು ಎಂದು ತಿಳಿದು, ಚಿಕ್ಕವನಾದ ಮೆಫೀಬೋಶೆತನನ್ನು ಬಾಚಿಕೊಂಡು ಅವಸರದಲ್ಲಿ ಓಡಿ ಹೋಗು ವಾಗ ಆಕೆ ಕೆಳಗೆ ಬಿದ್ದಳು, ತಿರಿಗಿ ಆಕೆ ಮಗುವನ್ನು ಎತ್ತಿಕೊಂಡು ಕತ್ತಲಿನಲ್ಲಿ ಓಡಿ ಹೋದಳು. ಅನಂತರ ಆಕೆ ಮಗುವನ್ನು ನೋಡುವಾಗ, ಅವನ ಎರಡು ಕಾಲುಗಳು ಊದಿಕೊಂಡು ಅಪಘಾತಕ್ಕೀಡಾಗಿ, ಅವನು ಜೀವನ ಪರ್ಯಂತರ. (ಎರಡು ಕಾಲನ್ನೂ ಕಳಕೊಂಡವನಾದನು.)

ಯೌವನಸ್ಥನಾದ ಮೆಫೀಬೋಶೆತನು ಮಾಕೀರನು ಎಂಬ ಒಬ್ಬ ಮನುಷ್ಯನ ಮನೆಯಲ್ಲಿ ಆಶ್ರಯ ಪಡೆದನು,[40] ಅವನು ಯೊರ್ದೋನಿನ ಪೂರ್ವಕ್ಕೆ[41] ಗಿಲ್ಯಾದಿನ ನಡುವೆ ಇದ್ದ ಲೋದೆಬಾರಿನಲ್ಲಿದ್ದನು. ಈ ಸ್ಥಳವು ದಾವೀದನಿಗೆ ದೂರವಾಗಿತ್ತು. ಈ ಏಕಾಂತದ ಸ್ಥಳದಲ್ಲಿ, ಮೆಫೀಬೋಶೆತನು ಅಗೋಚರವಾಗಿ ಬೆಳೆದು ಮದುವೆಯಾಗಿ, ಒಬ್ಬ ಮಗನನ್ನು ಪಡೆದಿದ್ದನು.[42] ಎಲ್ಲರೂ ಅವನನ್ನೂ ಮರೆತ್ತಿದ್ದದಾರೇ ಎಂದು ತಿಳಿದು, ತನ್ನ ಇರುವಿಕೆಯನ್ನು ಕಳಕೊಂಡಿದ್ದನು.

> ಅರಸನು - ಎಲ್ಲಿರುತ್ತಾನೆ ಎಂದು ಅವನನ್ನು ಕೇಳಲು ಅವನು ಲೋದೆ ಬಾರಿನಲ್ಲಿರುವ ಅಮ್ಮೀಯೇಲನ ಮಗನಾದ[43] ಮಾಕೀರನ ಮನೆಯಲ್ಲಿರುತ್ತಾನೆ ಎಂದು ಉತ್ತರಕೊಟ್ಟನು. ಕೂಡಲೆ ಅರಸನು ದೂತರನ್ನು ಕಳುಹಿಸಿ ಅವನನ್ನು ಲೋದೆಬಾರಿನಲ್ಲಿದ್ದ ಅಮ್ಮೀಯೇಲನ ಮಗನಾದ ಮಾಕೀರನ ಮನೆಯಿಂದ ಕರಿಸಿದನು (2 ಸಮುವೇಲ 9:4, 5).

ದಾವೀದನ ಸೇನಾಪಡೆಗಳು ಮೆಫೀಬೋಶೆತನನ್ನು ಸುತ್ತುವರಿಯಲು ಅವನು ಭಯ ಮತ್ತು ಆತಂಕದಿಂದ ತುಂಬಿದವನಾದನು. ದಾವೀದನ ರಥಗಳು ಅವನನ್ನು ಲೋದೇ ಬಾರಿನಿಂದ ಐವತ್ತು ಮೈಲುಗಳ ದೂರವಿದ್ದ ಯೆರೂಸಲೇಮಿಗೆ ಸಾಗಿಸಿದರು. ದಾವೀದನು "ದಯೆತೋರಿಸುವೆನು ಎಂದು ಹೇಳಿದ ಮಾತು" ಸತ್ಯವಾಗಿದ್ದರೂ, ಕೆಲವು ಸಾರಿ ಸಿಂಹಾಸನಕ್ಕೇರಲು ಕಾತುರ ಪಡುವವರನ್ನು ಅಳಿಸಿ ಹಾಕುವ ಕಾರ್ಯವು ಇದಾಗಿರುತ್ತಿತ್ತು (ಮೂಡಣ ದೇಶದ ಪಂಡಿತರಿಗೆ - ಹೆರೋದನ ನೀವು ಕೂಸನು ನೋಡಿದ ಮೇಲೆ

ಅದರ ವಿಷಯವನ್ನು ತಿಳಿಸಿರಿ ನಾನು "ಸಹ ಅದಕ್ಕೆ ಅಡ್ಡ ಬೀಳಬೇಕು"[44] ಅನ್ನುವಂಥದ್ದು ಮೋಸಕರವಾದ ಆಲೋಚನೆಯಾಗಿತ್ತು). ಬಹುಶ ಮೆಫೀಬೋಶೆತನು ದಾವೀದನ ತನ್ನ ತಂದೆಯೊಂದಿಗಿನ ಸ್ನೇಹ, ಮತ್ತು ದಾವೀದನ ತನ್ನ ತಂದೆಗೆ ಮಾಡಿದ ವಾಗ್ದಾನದ ಪ್ರಮಾಣದ ವಿಷಯವನ್ನು ಕೇಳಿರಬಹುದು; ಅಥವಾ ಕೇಳದೆ ಇರಬಹುದು. ಆದರೂ ಇಪ್ಪತ್ತು ವರ್ಷಗಳ ಹಿಂದೆ ಮಾಡಿದ ವಾಗ್ದಾನದ ನಿಮಿತ್ತ ತನ್ನ ಜೀವವನ್ನು ಸಂಕಷ್ಟಕ್ಕೆ ಈಡು ಮಾಡಿಕೊಳ್ಳಲು ಇಷ್ಟಪಡಲಿಲ್ಲ.

ಅವರು ಅರಮನೆಯ ಬಳಿಗೆ ಬರಲು, ಮೆಫೀಬೋಶೆತನು[45] ದಾವೀದನ ಸನ್ನಿಧಿಗೆ ಕುಂಟುತ್ತಾ ಹೋದನು. ದಾವೀದನು ಈ ಕುಂಟುತ್ತಿದ್ದ, ಭಯಭೀತನಾಗಿದ್ದ ಮೆಫೀಬೋಶೆತನ ಮುಖದಲ್ಲಿ ಧೈರ್ಯವುಳ್ಳ, ಸೈನಿಕನಾದ ತನ್ನ ಸ್ನೇಹಿತನ ಮುಖಚರ್ಯೆ ಇರುವುದೋ? ಎಂದು ನೋಡಿದನು.[46] ದಾವೀದನು ಮೆಫೀಬೋಶೆತನನ್ನು ಕರೆಯಲು, ಅವನು ದಾವೀದನಿಗೆ[47] ಸಾಷ್ಟಾಂಗ ನಮಸ್ಕಾರ ಮಾಡಿ, "ನಿನ್ನ ಸೇವಕನಾದ ನಾನು ಇಲ್ಲಿದ್ದೇನೆ ಅಂದನು" (2 ಸಮುವೇಲ 9:6).

ಯೌವನಸ್ಥನ ಸ್ವರದಲ್ಲಿ ದಾವೀದನು ಭಯವನ್ನು ಕಂಡಾಗ, "ಅವನಿಗೆ ಹೆದರಬೇಡ; ನಿನ್ನ ತಂದೆಯಾದ ಯೋನಾತಾನನನ್ನು ನೆನಸಿ ನಿನಗೆ ದಯೆತೋರಿಸುತ್ತೇನೆ. ನಿನ್ನ ಅಜ್ಜನಾದ ಸೌಲನ ಭೂಮಿಯನ್ನೆಲ್ಲಾ ನಿನಗೆ ಹಿಂದಕ್ಕೆ ಕೊಡುತ್ತೇನೆ; ಮತ್ತು ನೀನು ಪ್ರತಿ ದಿನ ನನ್ನ ಪಂಕ್ತಿಯಲ್ಲಿ ಊಟಮಾಡಬೇಕು ಎಂದು ಹೇಳಿದನು" (2 ಸಮುವೇಲ 9:7).

ದಾವೀದನು ಅರಸನಾದಾಗ, ನ್ಯಾಯಯುತವಾಗಿ, ಸೌಲನ ಆಸ್ಥಿಯು ದಾವೀದನಿಗೆ ಸೇರಿದ್ದಾಗಿತ್ತು. ದಾವೀದನು ಇದನ್ನು ಸೌಲನ ವಂಶಸ್ಥರಿಗೆ ನೀಡಲು ಹಿಂಜರಿಯಲಿಲ್ಲ. ಇದು ಒಂದು ಕೃಪೆಯ ಕಾರ್ಯವಾಗಿತ್ತು. ದಾವೀದನ ಹೃದಯದಲ್ಲಿ ಇನ್ನೂ ಜೀವಂತವಾಗಿದ್ದ, ಮೆಫೀಬೋಶೆತನ ತಂದೆಯ ಮೇಲಿದ್ದ ಪ್ರೀತಿಯಾಗಿತ್ತು. ಕರುಣೆಯ ವಸ್ತುವಾಗಿದ್ದ ಮೆಫೀಬೋಶೆತನು, ಒಂದೇ ರಾತ್ರಿಯಲ್ಲಿ ಬಹು ಐಶ್ವರ್ಯವಂತನಾದನು. ದಾವೀದನ ಪಂಕ್ತಿಯಲ್ಲಿ ಊಟಮಾಡಲು ದೊರಕಿದ ಆಹ್ವಾನವು ಅವನಿಗೆ ದೊಡ್ಡ ಗೌರವವಾಗಿತ್ತು. ಇದು ಅರಸರ ಮಕ್ಕಳಿಗೆ ಜನ್ಮಸಿದ್ಧ ಹಕ್ಕಾಗಿತ್ತು. ಮೆಫೀಬೋಶೆತನು ಅರಮನೆಗೆ ಹಿಂದಿರುಗಿದನು, ರಾಜಕುಮಾರನಂತೆ ಪೋಷಿಸಲ್ಪಟ್ಟನು, ಗೌರವವನ್ನು ಪ್ರಸಿದ್ಧಿಯನ್ನು ಪಡೆದನು.

"ಮೆಫೀಬೋಶೆತನು ಇದನ್ನು ಕೇಳಿ ಅರಸನಿಗೆ ಸಾಷ್ಟಾಂಗ ನಮಸ್ಕಾರಮಾಡಿ - ನೀನು ಸತ್ತ ನಾಯಿಯಂತಿರುವ ನನ್ನನ್ನು ಲಕ್ಷಿಸುವ ಹಾಗೆ ನಿನ್ನ ದಾಸನಾದ ನಾನು ಎಷ್ಟರವನು?" ಅಂದನು[48] (2 ಸಮುವೇಲ 9:8). ಅವನಿಗ ದಾವೀದನು ಭರವಸೆಯನ್ನು ನೀಡಿ, ಚೀಬನನ್ನು ಕರೆದು, ಮೆಫೀಬೋಶೆತನು ಹೊಂದಿದ ಎಲ್ಲಾ ಆಸ್ತಿಗೆ ಮೇಲ್ವಿಚಾರಕನನ್ನಾಗಿ ಮಾಡಿದನು.[49]

ಬೇಗನೇ ಮೆಫೀಬೋಶೆತನೂ, ಅವನ ಕುಟುಂಬವು, ತಮ್ಮ ರಾಜಧಾನಿಯ ಮನೆಗೆ ಹಿಂದಿರುಗಿದರು. "ಮೆಫೀಬೋಶೆತನಿಗೆ ಪ್ರತಿದಿನವೂ ರಾಜ ಪಂಕ್ತಿಯಲ್ಲಿ ಊಟವಾಗುತ್ತಿದ್ದುದರಿಂದ ಅವನು ಯೆರೂಸಲೇಮಿನಲ್ಲೇ ವಾಸಿಸಿದನು" (2 ಸಮುವೇಲ 9:13). ಇದು ಮೆಫೀಬೋಶೆತನಿಗೆ ಕೃಪೆಯಿಂದ ಬಂದ ಆಶೀರ್ವಾದವಾಗಿತ್ತು, ಮತ್ತು ಸಂದೇಹವಿಲ್ಲದೇ ದಾವೀದನಿಗೂ ಇದು ಆಶೀರ್ವಾದವಾಯಿತು. ನಾನು ಅರಸನ ಊಟದ ಪಂಕ್ತಿಯನ್ನು ನೋಡುತ್ತೇನೆ. ಅಲ್ಲಿ ಅರಸನು, ಯೋನಾತಾನನ ಜೊತೆಯಲ್ಲಿ ಹೊಲಗಳಲ್ಲಿ ಅನುಭವಿಸಿದ ಸಂತೋಷದ ದಿವಸಗಳನ್ನು ನೆನಪು ಮಾಡಿಕೊಂಡಾಗ, ಮೆಫೀಬೋಶೆತನ ಮುಖದಲ್ಲಿ ನಗುವನ್ನು ನೋಡಿದನು.[50] ಕರುಣೆ ತೋರುವಂಥದ್ದು, ಹೊಂದುವವನಿಗಿಂತ ತೋರುವವನಿಗೆ ಹೆಚ್ಚು ಆಶೀರ್ವಾದವನ್ನು ತರುತ್ತದೆ.

**ಜಯವನ್ನು ಹೊಂದಿದನು (2 ಸಮುವೇಲ 10-12; 1 ಪೂರ್ವಕಾಲವೃತ್ತಾಂತ 19; 20)**

ಇದು ದಾವೀದನ "ಶುಭದಿನಗಳ" ಸಮಯವಾಗಿತ್ತು 2 ಸಮುವೇಲ 1-10 ಅದರ ಹಿಂದಿನ ಅಧ್ಯಾಯದ ಕೆಳ, ಟಿಪ್ಪಣಿ ಹಾಗೂ ಅಧ್ಯಾಯ 8ರಲ್ಲಿ, "ಅಮ್ಮೋನಿಯರ ಮಕ್ಕಳು" ದಾವೀದನಿಗೆ ಕಪ್ಪಗಳನ್ನು ಕಳುಹಿಸಿದರು ಎಂದು ಗಮನಿಸುತ್ತೇವೆ (ವಚನ 12) ಆದರೆ ಅವರನ್ನು ಜಯಿಸಿದನು ಎಂದು ದಾಖಲೆಗಳಿಲ್ಲ. ಆದರೆ ಅದ್ಯಾಯ 10 ರಿಂದ 12ರವರೆಗೆ, ಅಮ್ಮೋನಿಯರ ಸಂಗಡ ಮಾಡಿದ, ಯುದ್ಧಗಳ *ವಿವರವನ್ನು* ನೀಡಲಾಗಿದೆ. ಅಧ್ಯಾಯ 8:6 ಹೀಗೆ ಅರಾಮ್ಯರು ಸಿರಿಯನ್ನುರು ಅವನ ಸೇವಕರಾಗಿ ಅವನಿಗೆ ಕಪ್ಪಕೊಡುವವರಾದರು. 8ನೇ ಅಧ್ಯಾಯ ಸಿರಿಯನ್ನರ ಸಂಗಡ ನಡೆದ ಯುದ್ಧಗಳ ವಿವರವನ್ನು ನೀಡುತ್ತದೆ - ಆದರೆ ಅಧ್ಯಾಯ 10ರಲ್ಲಿ "ಉಳಿದ ಚರಿತ್ರೆಯನ್ನು ನೀಡಲಾಗಿದೆ" - ಸಿರಿಯನ್ನರನ್ನು ಹೇಗೆ ಮತ್ತು ಎಲ್ಲಿ ಸ್ವಾಧೀನಪಡಿಸಿಕೊಂಡರು ಎಂದು ತಿಳಿಸಲಾಗಿದೆ.

ಅಧ್ಯಾಯ 9 ಮತ್ತು 10 - ಈ ಎರಡು ಅಧ್ಯಾಯಗಳೂ ದಯೆಯ ಕುರಿತಾಗಿ ಬರೆ ಯಲ್ಪಟ್ಟಿದೆ. ತಂದೆಗಳ ನಿಮಿತ್ತವಾಗಿ, ಮಕ್ಕಳಿಗೆ ತೋರಿದ ದಯದ ಬಗ್ಗೆ ನಮೂದಿಸಲಾಗಿದೆ. ಅಧ್ಯಾಯ 9ರಲ್ಲಿ ದಯೆಯನ್ನು ಕೃತಜ್ಞತಾ ಪೂರ್ವಿಕವಾಗಿ ಸ್ವೀಕರಿಸಲಾಯಿತು. ಅಧ್ಯಾಯ10ರಲ್ಲಿ ಅದನ್ನು ಕೋಪದಿಂದ ನಿರಾಕರಿಸಲಾಯಿತು.

ಅಧ್ಯಾಯ 10 ಈ ರೀತಿ ಪ್ರಾರಂಭವಾಗುತ್ತದೆ,

> ಇದಾದನಂತರ[51] ಅಮ್ಮೋನಿಯರ ಅರಸನು ಸತ್ತನು, ಅವನಿಗೆ ಬದಲಾಗಿ ಅವನ ಮಗನಾದ ಹಾನೂನನು ಅರಸನಾದನು. ದಾವೀದನು - ನಾಹಾಷನು ನನಗೆ ದಯೆತೋರಿಸಿದ್ದರಿಂದ ನಾನೂ ಅವನ ಮಗನಾದ ಹಾನೂನನಿಗೆ ದಯೆತೋರಿಸುವೆ ನು ಅಂದನು (ವಚನಗಳು 1, 2).

ಅಮ್ಮೋನಿಯರ ಅರಸನು ದಾವೀದನಿಗೆ ಯಾವ ವಿಧವಾದ ದಯೆಯನ್ನು ತೋರಿಸಿದ್ದನು ಎಂದು ತಿಳಿದು ಬರುವದಿಲ್ಲ. ಒಂದು ವೇಳೆ ಆತನು ತಪ್ಪಿಸಿಕೊಂಡು ಹೋದ ದಿವಸಗಳಲ್ಲಿ ದಯೆಯನ್ನು ಪಡೆದಿರಬಹುದು.[52] ಹೇಗೂ ದಾವೀದನೂ ದಯೆಗೆ, ದಯೆಯನ್ನು ತೋರಿಸಲು ಮುಂದಾದನು.

ಹಾನೂನುನನಿಗೆ ದಯೆತೋರಿಸಲು, ತನ್ನ ಸೇವಕರನ್ನು, ಅಮ್ಮೋನಿಯರ ಪಟ್ಟಣ ವಾದ, ರಬ್ಬಕ್ಕೆ[53] ಕಳುಹಿಸಿದನು. ಆದರೆ ಆ ಅರಸನ ಸೇವಕರು ಅರಸನಿಗೆ, ದಾವೀದನು ನಿನ್ನ ತಂದೆಯನ್ನು ಸನ್ಮಾನಿಸುವದಕ್ಕೆ ಕಳುಹಿಸಿರುವನೆಂದು ನೆನಸುತ್ತಿಯೇ? ನಿನ್ನ ಪಟ್ಟಣವನ್ನು ಸಂಚರಿಸಿ ನೋಡಿ ಸ್ವಾಧೀನ ಪಡಿಸಿಕೊಳ್ಳುವದಕ್ಕೊಸ್ಕರ ಕಳುಹಿಸಿರುವನು ಅಂದರು, ಆಗ ಅಮ್ಮೋನಿಯ ಅರಸನ ಪ್ರತಿಕ್ರಿಯೆ ಮಾತ್ರ, ಎರಡರಷ್ಟು ಅವಮಾನದಿಂದ ತುಂಬಿತ್ತು. "ಆದದರಿಂದ ಹಾನೂನನು ದಾವೀದನ ಸೇವಕರನ್ನು ಹಿಡಿಸಿ ಗಡ್ಡದ ಅರ್ಧ ಭಾಗವನ್ನು ಬೋಳಿಸಿ ಅವರ ದೇಹದ ನಿಲುವಂಗಿಗಳನ್ನು ಕುಂಡಿಯಿಂದ ಕೆಳಗಿನ ಭಾಗವನ್ನೆಲ್ಲ ಕತ್ತರಿಸಿ ಕಳುಹಿಸಿಬಿಟ್ಟನು" (2 ಸಮುವೇಲ 10:4). ಕೆಲವರು ಸಂಪೂರ್ಣ ಮುಖಕ್ಷಾರವನ್ನು ಮಾಡಿಸಿಕೊಂಡರೂ, ಗಡ್ಡ ಬೆಳೆಸು ವಂಥದ್ದು, ಸಾಮಾನ್ಯವಾಗಿ ಪುರುಷತ್ವಕ್ಕೆ ಸೂಚನೆಯಾಗಿದೆ. ಗಡ್ಡದ ಅರ್ಧ ಭಾಗವನ್ನು ತೆಗೆದು ಅವರನ್ನು ಹಿಂದಕ್ಕೆ ಕಳುಹಿಸಿದ್ದು, ಅವರು ಅಂಗಿಗಳನ್ನು ಸೊಂಟದ ಕೆಳಗಿನ ಅರ್ಧ ಭಾಗದವರೆಗೆ ಕತ್ತರಿಸಿದ್ದು, ಅವರ ಬೆತ್ತಲೆತನವನ್ನು ತೋರಿಸುತ್ತಿತ್ತು. ಅವರು ಮನುಷ್ಯರಿಗಿಂತ ಕೀಳಾದವರೆಂದು ಅರಸನು ಸಂದೇಶವನ್ನು ಕಳುಹಿಸಿದನು. ಇದು ಭಾಗದವರೆಗೆ ಕತ್ತರಿಸಿದ್ದು, ಅವರ ಬೆತ್ತಲೆತನವನ್ನು ತೋರಿಸುತ್ತಿತ್ತು. ಇದು ಎರಡನೆಯ ಅವಮಾನ. ಖೈದಿಗಳಿಗೆ ಮಾತ್ರ ಈ ಶಿಕ್ಷೆಯಾಗುತ್ತಿತು.[54]

ಅವಮಾನದಿಂದಲೂ, ನಾಚಿಕೆಯಿಂದಲೂ, ದಾವೀದನ ಸೇವಕರು ಹಿಂದಿರುಗಿದರು, ದಾವೀದನು ರೋಷಗೊಂಡರೂ, ಅಮ್ಮೋನಿಯರು ಅವರೊಂದಿಗೆ ಬೇರೆ ಮೂವತ್ತು ಸಾವಿರ

ಯುದ್ಧ ಮಾಡುವವರನ್ನು[55] (2/3 ಭಾಗ ಸಿರಿಯನ್ನರು[56]) ಸೇರಿಸಿಕೊಂಡು, ಯುದ್ಧಕ್ಕೆ ಸಿದ್ಧ ರಾಗುತ್ತಿದ್ದರೂ ಎಂದು ತಿಳಿದವನಾಗಿ ತಕ್ಷಣವೇ, ಉತ್ತಮ ಯುದ್ಧ ಶೂರರೊಂದಿಗೆ, ಯೋವಾಬನನ್ನು ರಣರಂಗಕ್ಕೆ ಕಳುಹಿಸಿದನು.

ಯೋವಾಬನು ರಬ್ಬಕ್ಕೆ ಬಂದಾಗ, ಅಲ್ಲಿ ಅವನು ಎರಡು ಕಡೆಯಿಂದ ಯುದ್ಧ ಮಾಡುವ ಸಂಧರ್ಭವುಂಟಾಯಿತು: ಒಂದು ಕಡೆ ಅಮ್ಮೋನಿಯರು, ಅವರ ಪಟ್ಟಣದಿಂದ ಯುದ್ಧ ಮಾಡುತ್ತಿದ್ದರು; ಇನ್ನೊಂದು ಸೈನ್ಯದ ದಂಡು ಬಯಲಿನ ಕಡೆಯಿಂದ ಆಕ್ರಮಣ ಮಾಡಲು ಸಿದ್ಧರಾಗಿದ್ದರು, ಸೋಲು ಖಚಿತವೆಂದು ತಿಳಿದರು. ಇದು ಯೋವಾಬನ ಜೀವನದ ಅತ್ಯುತ್ತಮ ಸಮಯವಾಗಿತ್ತು, ಯೋವಾಬನ ಉತ್ತಮವಾದ ಯುದ್ಧ ಶೂರರನ್ನು ತೆಗೆದು ಕೊಂಡು, ಅವರ ಬಾಡಿಗೆ ಸೈನ್ಯದ ಮೇಲೆ ಆಕ್ರಮಣ ಮಾಡಿದನು. ಮತ್ತು ಇತರ ಶೂರರನ್ನು ತನ್ನ ಸಹೋದರನಾದ ಅಭಿಷ್ಯೆಯ ಸಂಗಡ ಕಳುಹಿಸಿ ಅಮೋನಿಯರ ಮೇಲೆ ಯುದ್ಧ ಮಾಡಿದನು:

> ... ಅರಾಮ್ಯರು ನನ್ನನ್ನು ಸೋಲಿಸುವಂತೆ ಕಂಡರೆ ನೀನು ನನ್ನ ಸಹಾಯಕ್ಕೆ ಬಾ; ಅಮ್ಮೋನಿಯರು ನಿನ್ನನ್ನು ಸೋಲಿಸುವಂತೆ ಕಂಡರೆ ನಾನು ನಿನ್ನ ಸಹಾಯಕ್ಕೆ ಬರುವೆನು. ಧೈರ್ಯದಿಂದಿರು, ನಮ್ಮ ಜನರಿಗೋಸ್ಕರವೂ ನಮ್ಮ ದೇವರ ಪಟ್ಟಣಗಳಿಗೋಸ್ಕರವೂ ನಮ್ಮ ಪೌರುಷವನ್ನು ತೋರಿಸೋಣ; ಯೆಹೋವನು ತನಗೆ ಸರಿಕಾಣುವಂಥದ್ದನ್ನು ಮಾಡಲಿ ಎಂದು ಹೇಳಿ ಅವನನ್ನು ಅಮ್ಮೋನಿಯರಿಗೆ ವಿರೋಧವಾಗಿ ಕಳುಹಿಸಿದನು (2 ಸಮುವೇಲ 10:11, 12).

ಇದು ಯೋವಾಬನ ಬಾಯಿಂದ ಹೊರಟ ಅಭೂತಪೂರ್ವವಾದ ಉತ್ತೇಜನಕಾರಿಯಾದ, ಮತ್ತು ನಾವುಗಳು ಕಲಿಯುವಂಥ ಮಾತುಗಳೇ ಸಹಕಾರಕ್ಕೆ ಪೂರಕವಾದ, ಧೈರ್ಯಕ್ಕೆ ಅವಶ್ಯವಾದ, ಇನ್ನೊಬ್ಬರ ಬಗ್ಗೆ ಚಿಂತಿಸುವಂಥ, ಶ್ಲಾಘನೆಗೆ ಯೋಗ್ಯವಾದ ದೇವರ ಚಿತ್ತಕ್ಕೆ ಅನುಗುಣವಾಗಿ, ಪ್ರೋತ್ಸಾಹದಾಯಕವಾದ ಮಾತುಗಳಾಗಿದ್ದವು. ಈ ಮಾತುಗಳನ್ನಾಡಿದ ನಂತರ ಯೋವಾಬನು ದೇವರ ಸನ್ನಿಧಿಯಲ್ಲಿ ತಲೆಬಾಗಿದವನಾಗಿ ನಿಂತ್ತಿದ್ದನ್ನು ನಾನು ಕಾಣುತ್ತೇನೆ. ನಂತರ ಆ ಬೆಟ್ಟದಲ್ಲಿ ಅವರ ಆರ್ಭಟದ ಪ್ರತಿಧ್ವನಿಯನ್ನು ನಾನು ಕೇಳುತ್ತೇನೆ, ಆ ಭಯಂಕರ ಯುದ್ಧವನ್ನು ಎದುರಿಸಲು, ಅವರ ಕಣ್ಣುಗಳು ಬೆಂಕಿಯಂತಾಗಿದ್ದವು - ಇದು ಇಸ್ರಾಯೇಲ್ಯರ ಘನತೆಗಾಗಿ, ಮತ್ತು ದೇವರ ಮಹಿಮೆಗಾಗಿ.

ಯೆಹೋವನು ಅಂದು ಯೋವಾಬನಿಗೆ ದೊಡ್ಡ ಜಯವನ್ನು ಅನುಗ್ರಹಿಸಿದನು. ಸಿರಿಯನ್ನರು ಚದುರಿಹೋದರು; ಅಮ್ಮೋನಿಯರು ರಬ್ಬಕ್ಕೆ ಪಲಾಯನ ಮಾಡಿದರು, ಯೆಹೋವನ ಮೇಲೆ ಭರವಸೆವಿಡುವವರ ಸಂಗಡ ಯೆಹೋವನು ನೆಲೆಸಿರುತ್ತಾನೆ.

ಸೋತು ತಮ್ಮ ಪಟ್ಟಣಕ್ಕೆ ಪಲಾಯನವಾದ ಸಿರಿಯನ್ನರನ್ನು ನಾಯಕರುಗಳು[57] ನೋಡಿ, ಬಹು ರೋಷವುಳ್ಳವರಾದರು, ಮತ್ತು ಇಸ್ರಾಯೇಲ್ ಸಂಗಡ ಘೋರ ಯುದ್ಧ ಮಾಡಲು, ಸಿರಿಯನ್ನರು ಅಧಿಕ ಸಂಖ್ಯೆಯಲ್ಲಿ ಸೇರಿದ ಮತ್ತು ಅವರೊಂದಿಗೆ ಯೂಫ್ರೆಟಿಸ್ ನದಿಯ ತೀರದಲ್ಲಿದ್ದ ಸೈನಿಕರನ್ನು ಅಧಿಕ ಸಂಖ್ಯೆಯಲ್ಲಿ ತಮ್ಮೊಂದಿಗೆ ಸೇರಿಸಿಕೊಂಡರು.

ಇಷ್ಟು ಅಧಿಕ ಸಂಖ್ಯೆಯಲ್ಲಿ ವೈರಿಗಳು ತಮ್ಮ ಮೇಲೆ ಆಕ್ರಮಣ ಮಾಡಿದರೆ, ಅದರ ಪರಿಣಾಮ ಬಹು ಘೋರವಾದದ್ದೆಂದು ತಿಳಿದು, ಈ ಸಾರಿಯು ಜವಾಬ್ದಾರಿಯನ್ನು ಬೇರೆಯವರಿಗೆವಹಿಸದ. "ದಾವೀದನೇ ಇಸ್ರಾಯೇಲ್ಯರೆಲ್ಲರನ್ನೂ ಕೂಡಿಸಿಕೊಂಡು ಯೊರ್ದನ್ ಹೊಳೆದಾಟಿ ಹೇಲಾಮಿಗೆ ಬಂದನು" (2 ಸಮುವೇಲ 10:17) ಮತ್ತು ಅವರ ವೈರಿಗಳನ್ನು ವಶಪಡಿಸಿಕೊಂಡನು. ಇನ್ನೊಂದು ಸಾರಿ ದೇವರು ಇಸ್ರಾಯೇಲ್ಯರಿಗೆ ದೊಡ್ಡ ಜಯವನ್ನು ದಯಪಾಲಿಸಿದನು. ಸಿರಿಯನ್ನರ ಸೇನಾಧಿಕಾರಿಯ ಸಂಗಡ, ನಲವತ್ತೇಳು ಸಾವಿರ ಸಿರಿಯನ್ನರು ಸಂಹಾರಗೊಂಡರು. "ಇಸ್ರಾಯೇಲ್ಯರ ಮುಂದೆ ತಮ್ಮ ಕೈ ಸಾಗದೆಂದು ತಿಳಿದು ಅವರೊಡನೆ ಒಪ್ಪಂದ ಮಾಡಿಕೊಂಡು ಅವರ ದಾಸರಾದರು" (2 ಸಮುವೇಲ 10:19).[58]

ಅಮ್ಮೋನಿಯರು ರಬ್ಬದಲ್ಲಿ ಅವರು ಇನ್ನೂ ನೆಲಸಿದ್ದರಿಂದ, ಯುದ್ಧದ ಕಾರ್ಯ ಅಪೂರ್ಣವಾಗಿತ್ತು, ಮತ್ತು ಮುಂದಿನ ವಸಂತದಲ್ಲಿ ಅವರನ್ನು ವಶಪಡಿಸಿಕೊಳ್ಳಲು ದಾವೀದನ ಯೋವಾಬನನ್ನು ಕಳುಹಿಸಿದನು, ಆದರೆ ದಾವೀದನು ಯೆರೂಸಲೇಮಿನಲ್ಲಿಯೇ ಉಳಿದನು.[59] (ಈ ಸಮಯದಲ್ಲಿಯೇ ದಾವೀದನು ಬೆತ್ಸೆಬೆಯೊಡನೆ ಪಾಪ ಮಾಡಿದನು. ಈ ವಿಷಯವನ್ನು ನಾವು ಇಲ್ಲಿಗೆ ಬಿಟ್ಟು, ಪೂರ್ವಕಾಲ ವೃತ್ತಾಂತದ ಬರಹಗಾರನು, ಯಾವ ರೀತಿಯಲ್ಲಿ ಅಮ್ಮೋನ್ಯರ ಸಂಗಡ ನಡೆದ ಯುದ್ಧದ ಅಂತ್ಯವನ್ನು ತಿಳಿಸಿದ ಉದಾಹರಣೆಯನ್ನು ನೋಡೋಣ.)[60]

ಯೋವಾಬನು ರಬ್ಬದ ಮೇಲೆ ನೇರವಾಗಿ ಹೋರಾಡಿದನು ಆದರೆ ಕೋಟೆಯನ್ನು ಕೆಡವಲು ಸಾಧ್ಯವಾಗಲಿಲ್ಲ.[61] ಅವನು ಅಕ್ರಮಣ ಮಾಡಿ ಅದರ ಸುತ್ತಲೂ ಇದ್ದ ನೀರಿನ ಸರಭರಾಜನ್ನು ತಡೆಹಿಡಿದನು.[62] ನೀರಿನ ಸರಭರಾಜನ್ನು ತಡೆಹಿಡಿದಾಗ, ಅವರನ್ನು ವಶಪಡಿಸಿಕೊಳ್ಳಲು, ಸ್ವಲ್ಪ ಸಮಯದ ಅಗತ್ಯ ಮಾತ್ರ ಇತ್ತು. ಆಗ ಯೋವಾಬನು ದಾವೀದನಿಗೆ, “ನೀನು ಬೇಗನೆ ಉಳಿದ ಸೈನ್ಯವನ್ನು ಕೂಡಿಸಿಕೊಂಡು ಬಂದು ಪಟ್ಟಣಕ್ಕೆ ಮುತ್ತಿಗೆ ಹಾಕಿ ಉಳಿದ ಭಾಗವನ್ನು ಸ್ವಾಧೀನಪಡಿಸಿಕೋ; ಅದನ್ನು ನಾನೇ ಹಿಡಿದರೆ ಅದಕ್ಕೆ ನನ್ನ ಹೆಸರು ಬರುವದು ಎಂದು ಹೇಳಿ ಕಳುಹಿಸಿದನು” (2 ಸಮುವೇಲ 12:28).[63]

ದಾವೀದನು ರಬ್ಬಕ್ಕೆ ಬಂದು, ಯುದ್ಧವನ್ನು ಮುಂದುವರಿಸಿದನು. ಆ ಪಟ್ಟಣವು ಅವನಿಗೆ ವಶವಾದಾಗ, ಅರಸನಾದ ಅಮ್ಮೋನನ ಕಿರೀಟವನ್ನು ದಾವೀದನ ತಲೆಗೆ ತೊಡಿಸಿದರು, ಈ ಕಾರ್ಯವು ದಾವೀದನೇ ಅವರ ಅರಸನು ಎಂಬುದಕ್ಕೆ ಸೂಚನೆಯಾಯಿತು.[64] ಅನಂತರ ದಾವೀದನು ...

> ... ಊರಿನ ನಿವಾಸಿಗಳನ್ನು ಹಿಡಿದು ಗರಗಸ ಗುದ್ದಲಿ ಕೊಡಲಿಗಳಿಂದ ಕೆಲಸಮಾಡುವದಕ್ಕೂ ಇಟ್ಟಿಗೆಗಳನ್ನು ಮಾಡುವದಕ್ಕೂ ಹಚ್ಚಿದನು. ಅಮ್ಮೋನಿಯರ ಎಲ್ಲಾ ಪಟ್ಟಣದವರಿಗೂ ಇದೇ ಗತಿಯಾಯಿತು. ಅನಂತರ ದಾವೀದನು ಎಲ್ಲಾ ಸೈನಿಕರೊಡನೆ ಯೆರೂಸಲೇಮಿಗೆ ಬಂದನು (12:31 NIV).[65]

ದಾಖಲೆಗಳ ಪ್ರಕಾರ, ದಾವೀದನ ಸುತ್ತಲೂ ಇದ್ದ ಜನಾಂಗಳಲ್ಲಿ ಜರುಗಿದ ಪ್ರಮುಖ ದಂಗೆಗಳಲ್ಲಿ, ಇದು ಕಡೆಯದಾಗಿರುತ್ತದೆ.

ಅನೇಕ ವರ್ಷಗಳ ಹಿಂದೆ ದೇವರು ಅಬ್ರಹಾಮನಿಗೆ ಮಾಡಿದ ವಾಗ್ದಾನ: “ಐಗುಪ್ತದೇಶದ ನದಿಯಿಂದ ಯೂಫ್ರೇಟೀಸ್ ಮಹಾನದಿಯವರೆಗೂ ಈ ದೇಶವನ್ನೆಲ್ಲಾ ನಿನ್ನ ಸಂತತಿಯವರಿಗೆ ಕೊಟ್ಟಿದ್ದೇನೆ ಅಂದನು” (ಆದಿಕಾಂಡ 15:18). ದಾವೀದನ ಮೂಲಕ ದೇವರು ಈ ವಾಗ್ದಾನಗಳನ್ನು ನೆರವೇರಿಸಿದ್ದನು. ದಾವೀದನ ಸಾಮ್ರಾಜ್ಯವು ದಕ್ಷಿಣದ ಈಜಿಪ್ಟ್‌ನ[66] ನದಿಯಿಂದ ಉತ್ತರದ ಯೂಫ್ರೆಟಿಸ್ ಪೂರ್ವದ ಮಹಾ ಸಮುದ್ರ (ಮೆಡಿಟರೇನಿಯನ್) ಪಶ್ಚಿಮದ ಯೋರ್ದೋನಿನ ಮೇರೆಗಳವರೆಗೂ,[67] ಒಟ್ಟು ಆರು ಸಾವಿರ ಚದರ ಮೈಲುಗಳಷ್ಟು ಪ್ರದೇಶಗಳ ಮೇಲೆ ಆಳ್ವಿಕೆ ನಡೆಸಿದನು. ಶೇಕಡ 90ರಷ್ಟು ಪ್ರಪಂಚದ ಐಶ್ವರ್ಯವು ದಾವೀದನ ರಾಜ ದಂಡಕ್ಕೆ ವಶವಾಗಿತ್ತು.

ಬೇತ್ಲೆಹೇಮಿನವನಾದ ಕುರುಬ ದಾವೀದನು ನೆನಸಿದ ರೀತಿಯಲ್ಲಿ ದೇವರು ಅವನ ಕನಸ್ಸನ್ನು ಮೀರಿಸಿ ಅವನಿಗೆ ಯಶಸ್ಸನ್ನು ನೀಡಿದ್ದನು.

## ಪ್ರಾಮುಖ್ಯವಾದದ್ದನ್ನು ಕಳಕೊಳ್ಳದೆ, ಯಶಸ್ಸನ್ನು ಹೇಗೆ ಸಂಪಾದಿಸಬಹುದು

ದಾವೀದನು ಉನ್ನತ ಸ್ಥಿತಿಗೆ ಏರಿದ ಈ ಕಥೆಯಲ್ಲಿ ಯಾವ ಪಾಠವನ್ನು ಕಲಿಯಬಹುದು? ನಮ್ಮಲ್ಲಿರುವ ಪ್ರಾಮುಖ್ಯವಾದದೆಲ್ಲವನ್ನು ಕಳಕೊಳ್ಳದೆ ಹಾಗೆ ಯಶಸ್ಸನ್ನು ಸಂಪಾದಿಸಬಹುದು - ನಮ್ಮ ಆತ್ಮಗಳನ್ನೂ ಕಳಕೊಳ್ಳದೆ? ದಾವೀದನ ಯಶಸ್ಸಿನ ಕುರಿತಾಗಿ, ಐದು ವಿಧವಾದ ಸಲಹೆಗಳನ್ನು ತಯಾರಿಸಿದ್ದೇನೆ.

**(1) ನಿಮ್ಮ ಉದ್ದೇಶಗಳನ್ನು ಮರೆಯದಿರಿ.**

ಯಶಸ್ಸು ಕೆಲವು ಸಾರಿ ಅಥವಾ ಪ್ರಸಿದ್ಧಿ ಕುಪ್ರಸಿದ್ಧವನ್ನೂ ಕೀರ್ತಿಯನ್ನೂ ತಂದುಕೊಡುತ್ತದೆ. ಅದು ನಮಗೆ ಚಿತ್ತ ಭ್ರಮಣೆಯನ್ನು ತರುವಂಥದ್ದಾಗಿರುತ್ತದೆ. ನಂತರ ಅದು ನಮ್ಮನ್ನು ಸೋಲಿಗೆ ನಡಿಸುತ್ತದೆ ಅನೇಕ ಉದಾಹರಣೆಗಳಿವೆ: ದೂರದರ್ಶನ ಹಾಗೂ ಚಿತ್ರ ರಂಗದಲ್ಲಿ ಕೀರ್ತಿಪಡೆದ ಜನರು ಯಶಸ್ಸನ್ನು ಸಹಿಸಲಾಗದೆ. ಮಾದಕ ಪದಾರ್ಥಕ್ಕೂ ಕುಡಿತದ ಚಟಕ್ಕೂ ಬಲಿಯಾಗಿ ತಮ್ಮ ಜೀವನ ವೃತ್ತಿಯನ್ನು ಕಳಕೊಂಡಿದ್ದಾರೆ; ರಾಷ್ಟ್ರೀಯ ಆಟಗಳಲ್ಲಿ ಗೆದ್ದವರು, ಚಿತ್ತಭ್ರಮಗೆ ಹೊಂದಿ ಮರುವರ್ಷದಲ್ಲಿ ಸೋಲುವಂಥವರಾಗುತ್ತಾರೆ; ರಾಜಕೀಯ ವ್ಯಕ್ತಿಗಳು ಸಹ ತಮಗೆ ದೊರಕಿದ ಅಧಿಕಾರದ ನಿಮಿತ್ತ ಸೋಲುವಂಥವರಾ ಗಿರುತ್ತಾರೆ.

ನಮ್ಮ ಮುಂದಿನ *ಟ್ರೂತ್ ಫಾರ್ ಟುಡೇ* ದಾವೀದನು ತನ್ನ ಉದ್ದೇಶದಲ್ಲಿ ಚಿತ್ತಭ್ರಮಣೆ ಹೊಂದಿದ ವಿಷಯವನ್ನು ನೋಡುತ್ತೇವೆ - ಅದರಿಂದ ಉಂಟಾದ ದುಷ್‌ಪರಿಣಾಮವನ್ನು ನೋಡುತ್ತೇವೆ - ಆದರೆ ಈ ವಿಷಯಕ್ಕೆ ಸಂಬಂಧಿಸಿದಂತೆ ದಾವೀದನಿಗೆ ಉಂಟಾದ ಸವಾಲುಗಳನ್ನು ಎದುರಿಸುವಲ್ಲಿ ಸ್ಥಿರಚಿತ್ತನಾಗಿದ್ದನು: ದೇವರು ಸಿಂಹಾಸನರೂಢನಾಗಿದ್ದಾನೆ ಎಂದು ತೋರಿಸಲೂ, ಸಾಮ್ರಾಜ್ಯವನ್ನು ಸ್ಥಾಪಿಸಲೂ ಮತ್ತು ಮೆಸ್ಸಿಯನ್ನು ಹುಟ್ಟಿಬಂದಂತ ಜನಾಂಗವನ್ನು ರಕ್ಷಿಸಲೂ ದಾವೀದನು ಸ್ಥಿರಚಿತ್ತನಾಗಿ ಈ ಸವಾಲುಗಳನ್ನು ನೆರವೇರಿಸಿದನು.

ಗುರಿಹೊಂದಿರಬೇಕು. ಒಳ್ಳೆ ಗುರಿ ಇರುವವರೆಗೆ ಇದು ಒಳ್ಳೆಯದೇ ನಾವು ನಮ್ಮ ಆಧ್ಯತೆಗಳಿಗೆ ಪ್ರಾಮುಖ್ಯತೆ ನೀಡಬೇಕು: "ಮೊದಲು ದೇವರು" ನಂತರ ಇತರರು (ನಂತರದಲ್ಲಿ ಕುಟುಂಬಕ್ಕೆ ಪ್ರಥಮ ಸ್ಥಾನ) ನಮ್ಮ ಬಗ್ಗೆ ಕೊನೆಯದಾಗಿ[68] ನಾವು ಉದ್ದೇಶವನ್ನು ಸ್ಥಿರಪಡಿಸಿಕೊಂಡನಂತರ, ಚಿತ್ತ ಭ್ರಮಣೆ ಹೊಂದುವದು ಸಹಜ. ನಾವು ಜೀವನವೇನು ಎಂಬುದನ್ನು ಮರೆಯುತ್ತೇವೆ. ನಾವು ಪ್ರಾಮುಖ್ಯವಾದದನ್ನು ಉಳಿಸಿಕೊಳ್ಳಲು *ಕಷ್ಟಪಡಬೇಕು.*

ಪೌಲನ ಪ್ರಸಿದ್ಧವಾದ ಹೇಳಿಕೆಯನ್ನು ನೆನಪು ಮಾಡಿಕೊಳ್ಳಿರಿ: "ಸಹೋದರರರೇ ನಾನಂತೂ ಹಿಡಿದುಕೊಂಡವನೆಂದು ನನ್ನನ್ನು ಈವರೆಗೂ ಎಣಿಸಿಕೊಳ್ಳುವದಿಲ್ಲ; ಆದರೆ ಒಂದು, ನಾನು ಹಿಂದಿನ ಸಂಗತಿಗಳನ್ನು ಮರೆತುಬಿಟ್ಟು ಮುಂದಿನವುಗಳನ್ನು ಹಿಡಿಯುವುದಕ್ಕೆ ಎದೆಬೊಗ್ಗಿದವನಾಗಿ ದೇವರು ಕ್ರಿಸ್ತನ ಮೂಲಕವಾಗಿ ನಮ್ಮನ್ನು ಮೇಲಕ್ಕೆ ಕರೆದು ನಮ್ಮ ಮುಂದೆ ಇಟ್ಟಿರುವ ಬಿರುದನ್ನು ಗುರಿಮಾಡಿಕೊಂಡು ಓಡುತ್ತಾ ಇದ್ದೇನೆ" (ಫಿಲಿಪ್ಪಿ 3:13, 14). "ನಾನು ಒಂದನ್ನು ಮಾಡುತ್ತೇನೆ" ಎಂಬ ವಾಕ್ಯವನ್ನು ಗಮನಿಸಿ, "ನಾನು ಹನ್ನೆರಡು ವಿಷಯಗಳನ್ನು ಪ್ರಯತ್ನಿಸುವದಿಲ್ಲ," "ನೂರು ಸಂತಿಗಳನ್ನು ಮಾಡುವದಿಲ್ಲ" "ಆದರೆ ಒಂದನ್ನು ಮಾಡುತ್ತೇನೆ." ಪೌಲನು ಕ್ರಿಸ್ತನ ಮೇಲೆ ದೃಷ್ಟಿ ಇಟ್ಟಿದ್ದನು.

ನಿನ್ನ ಜೀವದಲ್ಲಿ ಯೆಹೋವನು ಯಾವ ಕಾರ್ಯವನ್ನು ಮಾಡಬೇಕೆಂದು ಬಯಸಿದ್ದಾನೆ, ಅದನ್ನು ಯೋಚಿಸುವದಕ್ಕೂ, ಅದಕ್ಕಾಗಿ ಪ್ರಾರ್ಥನೆ ಮಾಡುವದಕ್ಕೂ ಸಮಯವನ್ನು ತೆಗೆದುಕೊಳ್ಳಿ. ನಿಮ್ಮ ಉದ್ದೇಶ ಮತ್ತು ಗುರಿಯನ್ನು ಮರೆಯಬೇಡಿರಿ, ಸ್ಥಿರಚಿತ್ತದಿಂದಿರಿ.

**(2) ಋಣ ತೀರಿಸುವದನ್ನು ಮರೆಯಬೇಡಿರಿ.**

ನೀವು ಯಶಸ್ಸಿನ ಅಳತೆಯನ್ನು ಮುಟ್ಟಿದಾಗ, ಯಶಸ್ಸಿಗೆ ಸಹಾಯವಾದವರ ಋಣವನ್ನು ಮರೆಯಬೇಡಿರಿ. ಯಶಸ್ಸಿನ ತುದಿಗೆ ಏರಿದವರು ಅನೇಕಸಾರಿ "ಬಹಳ ದೊಡ್ಡವರಾಗಿ" ಅವರ ಈ ಯಶಸ್ಸಿಗೆ ಕಾರಣರಾದ "ಚಿಕ್ಕವರನ್ನು" ಮರೆತುಬಿಡುತ್ತಾರೆ.

ತನ್ನ ಯಶಸ್ಸಿಗೆ ಕಾರಣರಾದವರನ್ನು ದಾವೀದನೂ ಎಂದೂ ಮರೆಯಲಿಲ್ಲ. 2 ಸಮುವೇಲ 2:23, ದಾವೀದನು ತನ್ನ "ರಣಶೂರರ" ಹಾಗೂ "ಅವರ ಕೃತ್ಯಗಳ"

ಬಗ್ಗೆ ಗೌರವಿಸಿದ ಬಗ್ಗೆ ನಾನು ನಿಮಗೆ ನೆನಪುಮಾಡುತ್ತೇನೆ. ಎಲ್ಲಕ್ಕಿಂತಲೂ ಮಿಗಿಲಾಗಿ ದಾವೀದನು ಜಯ ನೀಡಿದ ದೇವರನ್ನು ಗೌರವಿಸಿದನು. ಕೀರ್ತನೆ 60ರಲ್ಲಿ: "ದೇವರಿಂದ ಶೂರಕೃತ್ಯಗಳನ್ನು ನಡಿಸುವೆವು, ನಮ್ಮ ವೈರಿಗಳನ್ನು ತುಳಿದು ಬಿಡುವವನು ಆತನೇ" (ವಚನ 12; ಒತ್ತಿ ಹೇಳಿದ್ದು ನನ್ನದು). ದಾವೀದನು ತನ್ನ ಕೊಳ್ಳೆಯಲ್ಲಿ ದೇವರಿಗೆ ಅರ್ಪಿಸುವದರ ಮೂಲಕ ಕೃತಜ್ಞತೆಯನ್ನು ಸಲ್ಲಿಸಿದನು.

ಅಪೊಸ್ತಲನಾದ ಪೌಲನು ಸಹ ತನ್ನ ಯಶಸ್ಸಿಗೆ ಕಾರಣರಾದ ಜನರನ್ನು ಮತ್ತು ದೇವರನ್ನು ನೆನಪು ಮಾಡಿಕೊಂಡನು. ಉದಾಹರಣೆ ರೋಮಾಪುರ 16ರಲ್ಲಿ ಫೋಯಿಬೆಯ ಕುರಿತಾಗಿ ಪೌಲನು ಮಾತನಾಡಿದನು "ಆಕೆಯು ನನಗೂ ಅನೇಕರಿಗೂ ಸಹಾಯ ಮಾಡಿದಳು" (ವಚನಗಳು 1, 2). ಪೌಲನ ಮೊದಲ ಪುಸ್ತಕಗಳಲ್ಲಿ ಹಾಗೆ ಪರಿಶುದ್ಧಾತ್ಮನು ಸಹ "ನಮ್ಮ ಅಶಕ್ತಿಯನ್ನು ನೋಡಿ ಸಹಾಯ ಮಾಡುತ್ತಾನೆ" (ರೋಮಾಪುರ 8:26). ಆತ್ಮೀಕ ಸಹೋದರಿ ಪೌಲನಿಗೆ ಸಹಾಯ ಮಾಡಿದಳು, ದೇವರೂ ಸಹ ಸಹಾಯ ಮಾಡಿದನು, ನಾವುಗಳು ಈ ಎರಡು ಸಹಾಯದ, ಮೂಲಗಳನ್ನೂ ತಿಳಿಯಲು ಪೌಲನು ಬಯಸುತ್ತಾನೆ.

ನಾವು ಯಾವುದೇ ಯಶಸ್ಸನ್ನು ಗಳಿಸಿದಾಗ, ಅವು ಎಷ್ಟೇ ಚಿಕ್ಕದಿದ್ದರು, ಅದಕ್ಕೆ ಕಾರಣರಾದವರನ್ನು ನಾವು ಕೃತಜ್ಞತೆಯಿಂದ ಒಪ್ಪಿಕೊಳ್ಳಬೇಕು. ಒಂದು ವೇಳೆ ವೇಧಿಕೆಯ ಮೇಲೆ ನಿಂತು, "ನಾನು ನನ್ನ ತಂದೆ ತಾಯಿಗಳನ್ನು ನನ್ನ ಗುರುಹಿರಿಯರನ್ನು ವಂದಿಸುತ್ತೇನೆ" ಎಂದು ಹೇಳುವದಕ್ಕೆ ಅವಕಾಶ ದೊರೆಯದಿದ್ದರೂ ಸಹ, ಮುಖಾಮುಖಿಯಾಗಿ, ಫೋನಿನ ಮೂಲಕವಾಗಿ ಅಥವಾ ಪತ್ರದ ಮೂಲಕವಾಗಲೀ, ನಾವು ಕೃತಜ್ಞತೆಯನ್ನು ಸಲ್ಲಿಸಬಹುದು.

ಎಲ್ಲಕ್ಕಿಂತಲೂ ಹೆಚ್ಚಾಗಿ, ನಮ್ಮ ಯಶಸ್ಸಿಗೆ ಕಾರಣಕತೃ, *ದೇವರೇ* ಎಂದು ಅರಿಕೆ ಮಾಡಿಕೊಳ್ಳಬೇಕು, ಒಂದು ಪ್ರಸಿದ್ಧಿಯಾದ ಆಟದಲ್ಲಿ ಒಬ್ಬನು ಗೆದ್ದು ಬಂದರೆ, ಆ ಗೆಲುವಿಗೆ ಕಾರಣವೇನು ಎಂಬ ಪ್ರಶ್ನೆಯನ್ನು ಕೇಳಲಾಗುತ್ತದೆ. ಅವನ ಪ್ರಯಾಸಕರವಾದ ತರಬೇತಿ ಹಾಗೂ ಮತ್ತು ಅವನ ಗುರಿಯ ಬಗ್ಗೆ ಅವನು ಉತ್ತರಿಸುತ್ತಾನೆ - ಇದು ನಿಸ್ಸಂದೇಹವಾದ ವಿಷಯಗಳೇ, ಮತ್ತು ಸ್ವಶಿಸ್ತನ್ನು ತೋರಿಸುತ್ತದೆ. ಆದರೆ ನೂರಾರು ಜನರು ಈ ರೀತಿಯಾಗಿ ಪ್ರಯಾಸ ಪಟ್ಟರೂ, ಅವರಿಗೆ ಯಾಕೆ ಯಶಸ್ಸು *ದೊರಕಲಿಲ್ಲ?* ಆದರೆ ಯಾಕೆ ಅವನೊಬ್ಬನೆ ಗೆದ್ದನು? ಯಾಕೆಂದರೆ ಮೊದಲನೆಯದಾಗಿ, *ದೇವರು* ಅವನಿಗೆ ವಿಶಿಷ್ಟವಾದ ತಲಾಂತುಗಳನ್ನು ಸಮಾರ್ಥ್ಯವನ್ನು ನೀಡಿದನು. ದೇವರು ಅವನಿಗೆ ನೀಡಿದವುಗಳನ್ನು ಅಭಿವೃದ್ಧಿಪಡಿಸಿಕೊಳ್ಳ ಬೇಕು, ಆದರೇ ಅನೇಕರಾದ ನಮಗೆ ದೇವರು ಇದನ್ನು ನೀಡಿರುವದಿಲ್ಲ.

ಪರೀಕ್ಷೆಯಲ್ಲಿ ಉತ್ತೀರ್ಣರಾಗುವುದೂ, ಒಂದು ಸಂಗಾತಿಯನ್ನು ಪಡೆಯುವದೂ, ಪ್ರೌಢಶಿಕ್ಷಣದಿಂದ ತೇರ್ಗಡೆಯಾಗುವದೂ, ಉದ್ಯೋಗವನ್ನು ಪಡೆಯುವದೂ, ಮನೆಯನ್ನು ಕೊಂಡುಕೊಳ್ಳುವದೂ, ಮಗುವನ್ನು ಪಡೆಯುವದೂ, ಬಡ್ತಿ ಪಡೆಯುವದೂ, ರೋಗದಿಂದ ಗುಣಮುಖರಾಗುವದೂ ಅಥವಾ ಒಲಂಪಿಕ್ಸ್‌ನಲ್ಲಿ ನೂರು ಮೀಟರ್ ಓಟದಲ್ಲಿ ಗೆಲ್ಲುವದೂ ಎಲ್ಲಾ ಯಶಸ್ಸಿಗೆ ಕಾರಣ ಯೆಹೋವನು - ದೇವರೆ ಎಂದು ಅರಿಕೆ ಮಾಡೋಣ. "ಎಲ್ಲಾ ಒಳ್ಳೇ ದಾನಗಳೂ ಕುಂದಿಲ್ಲದ ಎಲ್ಲಾ ವರಗಳೂ ಮೇಲಿನಿಂದ ಸಕಲ ವಿಧವಾದ ಬೆಳಕಿಗೂ ಮೂಲಕಾರಣನಾದವನಿಂದ ಇಳಿದು ಬರುತ್ತದೆ" (ಯಾಕೋಬ 1:17). ಒಬ್ಬ (ಫುಟ್ ಬಾಲ್) ಕಾಲು ಚೆಂಡಿನ ಆಟಗಾರನು, ಸಾರ್ವಜನಿಕವಾಗಿ ನಿಂತು, ತನಗೆ ದೊರಕಿದ ಗೆಲುವಿಗಾಗಿ, ಸಾರ್ವಜನಿಕರಿಗೆ ತಲೆಬಾಗಿ ಕೃತಜ್ಞತೆಯನ್ನು ಹೇಳುವ ಹಾಗೆ - ಅವಕಾಶ ನಮಗಿಲ್ಲದಿದ್ದರೂ ದೇವರಿಗೆ ನಮ್ಮ ಸ್ವರವನ್ನೆತ್ತಿ ಸ್ತೋತ್ರ ಮಾಡುವದರ ಮೂಲಕ ದೇವರು ನಮ್ಮಲ್ಲಿ ತೋರಿದ ಒಳ್ಳೇಯ ಕಾರ್ಯಗಳನ್ನು ಇತರರೊಂದಿಗೆ ಹಂಚಿಕೊಳ್ಳಬಹುದು. ಹಾಗು ದಾವೀದನಂತೆ ದೇವರು ದಯಪಾಲಿಸಿದವುಗಳನ್ನು ದೇವರಿಗೆ ಸಮರ್ಪಿಸೋಣ.

**(3) ನೀವು ಮಾಡಿಕೊಂಡ ಒಡಂಬಡಿಕೆಯನ್ನು (ವಚನ ಬದ್ಧತೆ) ಮರೆತುಬಿಡಬೇಡಿ.**

ಅನೇಕರು ತಮ್ಮ ಯಶಸ್ಸಿನ ಶಿಖರವನ್ನು ತಲುಪುವಾಗ, ಸಮಯಕ್ಕೆ ಅನುಗುಣವಾಗಿ, ಅವರಿಗೆ ದೊರಕಿದ ವಾಗ್ದಾನವನ್ನು ಮತ್ತು ಅವರು ಮಾಡಿಕೊಂಡ ಒಡಂಬಡಿಕೆಯನ್ನು ಮರೆತು ಬಿಡುತ್ತಾರೆ. ಒಬ್ಬನು ಮದುವೆಯಾದ ನಂತರ, ತನ್ನ ಕಷ್ಟದಲ್ಲಿ ಸಹಕರಿಸದ ಹೆಂಡತಿಯು ಅವನಿಗೆ ತೊಂದರೆಗೊಳಗಾಗುತ್ತಾಳೆ. ಅಂತವಳನ್ನು ಹೊರಕ್ಕೆ ಹಾಕಬೇಕು ಎಂದು ಯೋಚಿಸುತಾನೆ. ಒಬ್ಬ ಹಳೆಯ ವ್ಯಾಪಾರದ ಪಾಲುಗಾರನ ಸಂಗಡ ಮಾಡಿಕೊಂಡ ಒಪ್ಪಂದ ಲಾಭದಾಯಕವಲ್ಲದ್ದರಿಂದ ಈಗ ಈಡೇರಿಸಲು ಅಸಾಧ್ಯವಾಗಿದೆ. ಈ ಒಪ್ಪಂದಕ್ಕೆ "ನಾವು ಸಹಿಯನ್ನು ಮಾಡಲೇ ಇಲ್ಲ" ಎಂದು ತಪ್ಪಿಸಿ ಕೊಳ್ಳಬೇಕಾಗುತ್ತದೆ.

ಇಪ್ಪತ್ತು ವರ್ಷಗಳ ಹಿಂದೆ ತಾನು ಮಾಡಿದ ವಾಗ್ದಾನಗಳನ್ನು ದಾವೀದನು ನೆರವೇರಿಸುವ ಸಂಧರ್ಭಕ್ಕೆ ಬಂದಿದ್ದನು. ಆತನಿಗೆ ಸೌಲನು ಮಾಡಿದ ಕೆಟ್ಟ ಸಂಗತಿಗಳ ಕಾರಣದಿಂದ ಅವನು ಈ ವಾಗ್ದಾನಗಳನ್ನು ಮರೆತುಹೋಗಿದ್ದರೂ ಯಾರೂ ಅವನನ್ನು ದೂಷಿಸುತ್ತಿರಲಿಲ್ಲ. ಆದರೆ ದಾವೀದನು ಇದನ್ನು ದೇವರ ಸನ್ನಿಧಿಯಲ್ಲಿ,[69] ಮಾಡಿದ ಪರಿಶುದ್ಧವಾದ ವಾಗ್ದಾನವೆಂದು ತಿಳಿದು, ಅದನ್ನು ಮುರಿದು ಹಾಕದೆ, ಯೋನಾತಾನನ ಮಗನನ್ನು ಹುಡುಕಿ ತಾನು ಮಾಡಿದ ವಾಗ್ದಾನವನ್ನು ಗೌರವಿಸಿದನು.

ನಾವೆಲ್ಲರು ಒಡಂಬಡಿಕೆಯನ್ನು ಮಾಡಿಕೊಂಡಿದ್ದೇವೆ, ಕ್ರೈಸ್ತರಾದ ನಾವು ನಮ್ಮ ನಂಬಿಕೆಯನ್ನು ಅರಿಕೆ ಮಾಡಿ, ದೀಕ್ಷಾಸ್ನಾನದ ಮೂಲಕ ಒಡಂಬಡಿಕೆಯನ್ನು ಮಾಡಿಕೊಂಡಿದ್ದೇವೆ. ಜೀವನ ಪರ್ಯಾಂತರ "ಪ್ರೀತಿಸಿ, ಗೌರವಿಸಿ, ಮತ್ತು ಪೋಷಿಸುತ್ತೇವೆ" ಎಂದು ನಮ್ಮ ಹೆಂಡತಿಗೆ - ಅಥವಾ ಗಂಡನಿಗೆ[70] ವಾಗ್ದಾನ ಮಾಡಿದ್ದೇವೆ. ಬಹುಶ ಬೇರೆ ಒಡಂಬಡಿಕೆಯನ್ನು ಸಹ ಮಾಡಿರಬಹುದು ಅರಣ್ಯಕಾಂಡ 30:2ನ್ನು ಗಮನಿಸಿ. "ಯಾವಾನಾದರೂ ಯೆಹೋವನಿಗೆ ಹರಕೆ ಮಾಡಿದರೆ ಇಲ್ಲವೆ ತಾನು ಯಾವದಾದರೂ ಒಂದನ್ನು ಮುಟ್ಟದೆ ಇರುವೆನೆಂದು ಆಣೆಯಿಟ್ಟುಕೊಂಡರೆ ಅವನು ತನ್ನ ಮಾತನ್ನು ಮೀರದೆ ಹೇಳಿದಂತೆಯೇ ನೆರವೇರಿಸಬೇಕು." ನಮ್ಮ ವಾಗ್ದಾನಗಳನ್ನು ನಾವು ನೆರವೇರಿಸದೇ ಹೋದರೆ ನಾವು ಯಥಾರ್ಥತೆಯನ್ನು ಅಭ್ಯಾಸ ಮಾಡಲು ಸಾಧ್ಯವಿಲ್ಲ.

**(4) ಯಶಸ್ಸು ವೇಗವಾಗಿ ಇಲ್ಲದಂತಾಗುತ್ತದೆ ಇದನ್ನು ಮರೆಯಬೇಡಿ.**

ಒಂದು ದಿನ "ಏನೋ ಆಗಿದ್ದವನು" ಮರುದಿನ "ಯಾರೋ ಆಗುವದಕ್ಕೆ" ಸಾಧ್ಯವಿದೆ. ಒಂದು ದಿನ ಮಿಲಿಯಾಂತರ ಹಣ ಹೊಂದಿದ್ದರೆ ಮುಂದಿನ ಒಂದು ಪೈಸೆಯು ಇಲ್ಲದಂಥವನಾಗಬಹುದು. ಒಂದು ದಿನ ಸಂಘದ ಅಧ್ಯಕ್ಷನಾದವನು ಮರುದಿನ ಆದರೆ ಸಿಬ್ಬಂದಿಯಾಗಲು ಸಾಧ್ಯವಿದೆ, ಆರೋಗ್ಯವಾಗಿದ್ದವನು ಮರುದಿನ ತುರ್ತುನಿಗಮದಲ್ಲಿ ಇರುವದಕ್ಕೆ ಸಾಧ್ಯವಿದೆ. ಹೆಮ್ಮೆಯ ತಂದೆ ತಾಯಿಗಳಾದವರು ಮರುದಿನ ಮುರಿದ ಮನಸ್ಸಿನ ತಂದೆ ಅಥವಾ ತಾಯಿಯಾಗುವದಕ್ಕೆ ಸಾಧ್ಯವಿದೆ.

ಅತಿ ಉತ್ತಮರೂ ಸದಾಕಾಲ ಉತ್ತಮರಾಗಿರುವದು ಅಸಾಧ್ಯ. ಒಬ್ಬ ಅನುಭವಿಗೆ ವಯಸ್ಸಾಗುವಾಗ ತಿರಸ್ಕರಿಸಲ್ಪಡುತ್ತಾನೆ. ಮರುವರ್ಷದ ಮಿಸ್ ಅಮೇರಿಕಾವನ್ನು ಈ ವರ್ಷದ ಮಿಸ್ ಅಮೇರಿಕಾ ಬದಲಾಯಿಸುತ್ತಾಳೆ. ಒಂದು ಕಂಪನಿಯೂ ಮುಖ್ಯ ಕಾರ್ಯನಿರ್ವಾಹಣೆನಿಗೆ ಈ ವರ್ಷ ರಸದೌತಣ ನೀಡಿದರೂ ಮರುವರ್ಷ ಅವನು ತಿನ್ನುವದಕ್ಕೆ ಹೊರಗಡೆ ಹೋಗಬೇಕಾಗುತ್ತದೆ. ಈ ಹೊತ್ತು ನಮ್ಮ ಹೃದಯಕ್ಕೆ ಹತ್ತಿರವಾದ ವ್ಯಕ್ತಿಗಳನ್ನು ನಾಳೆ ಬರುವಂಥವರು ಅವರನ್ನು ಬದಲಾಯಿಸುತ್ತಾರೆ.

ಯಶಸ್ವಿಯನೊಂದಿಗೆ ದಾವೀದನು ಯಾವಾಗಲೂ ಹೋರಾಟ ನಡೆಸುತ್ತಿದ್ದನು. ಯಶಸ್ಸನ್ನು ಜಯದ ಬಹುಮಾನವೆಂದು, ಮತ್ತು ಅದರಿಂದ ಸಂತೋಷ ಪಡೆಯಬಹುದೆಂದು ಒಂದು ಪೆಟ್ಟಿಗೆಯಲ್ಲಿ ಅದನ್ನು ಇಡಲಿಲ್ಲ, ಅವನು ಯಾರ ಮೇಲೆ ಜಯಹೊಂದಿದ್ದನೋ ಅವರು ತಿರುಗಿ

ಅವನ ಮೇಲೆ ಎದ್ದು ಅವನ ಜೀವಿತವನ್ನು ಚಿಂತೆಗೆ ಈಡು ಮಾಡಿದರು. ವ್ಯವಸ್ಥೆಗಳು ಹಾಳಾಗದಂತೆ ಅದನ್ನು ಸರಿಪಡಿಸ ಬೇಕಾಯಿತು. ಅಲ್ಪಕಾಲದ ಶರೀರದಾಶೆಯು, ಅವಮಾನದ ಸಮಯವನ್ನು ತಂದಿತು. ಈ ಕಾರ್ಯವು ಯಶಸ್ಸಿನ ತುದಿಯಿಂದ ದಾವೀದನು ಮುಗ್ಗರಿಸುವಂತೆ ಮಾಡಿತು. ಅವನ ಹೃದಯ ಬಾರವಾಗುವಂತೆ ಮಾಡಿತು. "ನಿಮ್ಮ ಜೀವಮಾನವು ಎಂಥದು? ನೀವು ಸ್ವಲ್ಪ ಹೊತ್ತು ಕಾಣಿಸಿಕೊಂಡು ಆ ಮೇಲೆ ಕಾಣದೆ ಹೋಗುವ ಹಬೆಯಂತಿರುತ್ತೀರಿ" (ಯಾಕೋಬ 4:14).

ದೇವರು ಯಶಸ್ಸನ್ನು ನೀಡುವಾಗ, ಅದನ್ನು ಆ ಸಮಯದಲ್ಲಿಯೇ ಸಂತೋಷಿಸಿರಿ. ಆದರೆ ಅದನ್ನು ಯಥಾದೃಷ್ಟಿಯಿಂದ ಪರಿಗಣಿಸಿರಿ, ಯಾಕೆಂದರೆ ಅದು ನಿಮ್ಮನ್ನು ತೊರೆದು ಕಿಟಕಿಯಿಂದ ಹೊರಟು ಹೋಗುವಾಗ ನೀವೂ ಅದರ ಜೊತೆ ಕಿಟಕಿಯಿಂದ ಜಾರಿ ನೆಗೆದು ಹೋಗದಿರ್ರಿ, ಕೊನೆಯಲ್ಲಿ ಉಳಿಯುವ ಯಶಸ್ಸು ಯಾವದೆಂದರೆ ದೇವರು ನಿಮ್ಮನ್ನು ನೋಡಿ, ಭಲಾ - "ನಂಬಿಗಸ್ತನಾದ ಒಳ್ಳೇ ಆಳು" ಎಂದು ಹೇಳುವ ಮಾತು ಮಾತ್ರ (ಮತ್ತಾಯ 25:21; KJV).

**(5) ನೀವು ಅವಕಾಶವೀಯುವಂಥವರು ಎಂಬದನ್ನು ಮರೆಯಬೇಡಿರಿ.**

ದಾವೀದನ ಯಶಸ್ಸನು ಮೊಟಕು ಮಾಡಿದ ಘಟನೆಯನ್ನು ಮುಂದಾಗಿ ಗ್ರಹಿಸದೆ ಈ ಪಾಠವನ್ನು ನಾನು ಅಂತ್ಯಗೊಳಿಸುವ ಹಾಗೆ ಇಲ್ಲ. ಒಂದು ಸಾರಿ ಒಬ್ಬ ಬೋಧಕರು[71] ಹೇಳಿದ್ದು ಪ್ರಸಿಧ್ಧಿಯನ್ನೂ ಯಶಸ್ಸನ್ನೂ ಗಳಿಸಿದ ಜನರು ಈ ಕೆಳಕಂಡ ಯಾವುದಾದರೂ, ಒಂದು ವಿಷಯದಲ್ಲಿ ಸೋತುಹೋಗುತ್ತಾರೆ. "ಬೆಳ್ಳಿ," "ಆಲಸ್ಯ," "ಕಾಮ," ಅಥವಾ "ಸ್ವಾರ್ಥ." ಪ್ರಾಮುಖ್ಯವಾಗಿ ಬೆಳ್ಳಿಯ ದೆಸೆಯಿಂದ ಅವನು ಶೋಧನೆಗೆ ಒಳಗಾಗಲಿಲ್ಲ. ಆದರೆ ಉಳಿದ ಮೂರು ವಿಷಯಗಳು ಅವನನ್ನೂ ನಾಶಮಾಡಿದವು. ದಾವೀದನು ಭಾವನಾತ್ಮಕ ವ್ಯಕ್ತಿಯಾಗಿದ್ದನು, ದೇವರನ್ನು ಅವನು ಸ್ತುತಿಸುತ್ತಿದ್ದನು. ಯೆಹೋವನ ಯುದ್ಧವನ್ನು ಮಾಡುವಾಗ, ಭವಿಷ್ಯತ್ತಿನ ಸ್ಪಷ್ಟವಾದ ಯೋಜನೆಗಳನ್ನು ಮಾಡುವಾಗ, ಅದು ಬಹು ಪ್ರಶಂಸನೀಯವಾಗಿತ್ತು. ಆದರೆ ಹೇಗೂ ಒಬ್ಬಳು ಸುಂದರಿಯಾದ ಸ್ತ್ರೀಯನ್ನು ನೋಡಿದಾಗ, ಅವನ ಬಲವು ಬಲಹೀನವಾಯಿತು. ಯಾವಾಗ ಒಂದು ಸಾಯಂಕಾಲ ದಾವೀದನಿಗೆ ನಿರ್ಲಿಪ್ತತೆ, ಕಾಮದ ಶೋಧನೆ, ಸ್ವಾರ್ಥತೆ. ಸಂಧಿಸಿತೋ ಆಗ ದಾವೀದನು ಕೀಳು ಮಟ್ಟಕ್ಕೆ ಇಳಿದು ಹೋದನು, ಈ ವಿಷಯವು ಇಡೀ ರಾಷ್ಟ್ರಕ್ಕೆ ಪ್ರಸಾರವಾಯಿತು.

ದಾವೀದನು ಈ ಅವಕಾಶವನ್ನು ನೀಡಿದಕ್ಕೆ ಸಾಕಷ್ಟು ಎಚ್ಚರವುಳ್ಳವನಾಗಿರಲಿಲ್ಲ, ಅಥವಾ ಗ್ರಹಿಸಲಿಲ್ಲ, ತನ್ನನ್ನು ರಕ್ಷಿಸಿಕೊಳ್ಳಲು ಸಾಕಷ್ಟು ಮುನ್ನಚರಿಕೆಯನ್ನು ವಹಿಸಲಿಲ್ಲ, ಯಾಕೋಬನು ಎಚ್ಚರಿಕೆ ನೀಡಿದಂತೆ, "ಆದರೆ ಪ್ರತಿಯೊಬ್ಬನು ತನ್ನಲ್ಲಿರುವ ಆಶಾಪಾಶದಿಂದ ಎಳೆಯಲ್ಪಟ್ಟು ಮರಳುಗೊಂಡವನಾಗಿ *ಪ್ರೇರೇಪಿಸಲ್ಪಡುತ್ತಾನೆ*" (ಯಾಕೋಬ 1:14; ಒತ್ತಿ ಹೇಳಿದ್ದು ನನ್ನದು). ನಾವೆಲ್ಲರು ಅವಕಾಶನೀಡುವವರಾಗಿ ದ್ದೇವೆ. ಪ್ರತಿಯೊಬ್ಬರು ಬಲಹೀನತೆಯ ಕ್ಷೇತ್ರವನ್ನು ಹೊಂದಿದ್ದೇವೆ. ನನ್ನ ಬಲಹೀನ ತೆಯು ನಿನ್ನದಾಗಲಾರದು. ಪ್ರತಿಯೊಬ್ಬನು ತನ್ನ ಬಲಹೀನತೆಯ ಬಗ್ಗೆ ಎಚ್ಚರವುಳ್ಳ ವನಾಗಿದ್ದರೆ: *ಸೈತಾನನು* ನಿಮ್ಮ ಬಲಹೀನತೆಯನ್ನು ತಿಳಿದು ಅದರಿಂದ ನಿಮ್ಮನ್ನು ನಾಶಮಾಡುತ್ತಾನೆ.

ಇದನ್ನು ಇನ್ನು ಮಾಡದೇ ಹೋಗಿದ್ದರೆ, ನೀನು ಅವಕಾಶವನ್ನು ನೀಡಬಹುದಾದ ಕ್ಷೇತ್ರವನ್ನು ತಿಳಿದು ಕೊಂಡು; ಈ ಕ್ಷೇತ್ರದಲ್ಲಿ ಉಂಟಾಗುವ ಶೋಧನೆಯಿಂದ ತಪ್ಪಿಸಿಕೊಳ್ಳಬಹುದು.

## ಮುಕ್ತಾಯ

ನಾವು ಕೇವಲ ಚಿನ್ನದ ಪದಕವನ್ನೂ, ದೊಡ್ಡ ಸಂಬಳವನ್ನೂ ಅಥವಾ *ಟೈಮ್ ವಾರ*

*ಪತ್ರಿಕೆಯ* ಮುಖಪುಟದಲ್ಲಿ ತಮ್ಮ ಭಾವ ಚಿತ್ರವನ್ನು ಹಾಕಿಸಿಕೊಂಡವರ ಬಗ್ಗೆ ಮಾತನಾಡುತ್ತಿಲ್ಲ. ನಾವು ಈ ದಿನ ಇರವಂಥ ಉದ್ದೇಶ, ಬೆನ್ನಿಗೆ ಬಟ್ಟೆಯನ್ನು ಹೊದ್ದುಕೊಂಡು, ಉಸಿರಾಡುತ್ತಾ, ದೇವರು ನಮಗೆ ಸ್ವಲ್ಪ ಮಟ್ಟಿಗೆ ಯಶಸ್ಸನ್ನು ನೀಡಿದ್ದಾನೆ ಎಂದು ತಿಳಿಸುತ್ತೇವೆ, ದಾವೀದನ ಯಶಸ್ಸಿನಿಂದ ಪಾಠವನ್ನು ಕಲಿತು ಕೊಳ್ಳೋಣ, ಒಂದು ಕಡೆ ದೇವರಿಗೆ ಮಹಿಮೆಯನ್ನು ಸಲ್ಲಿಸೋಣ ಮತ್ತು ಯಶಸ್ಸಿನಿಂದ ಉಂಟಾಗುವ ಶೋಧನೆಗಳಿಂದ ತಪ್ಪಿಸಿಕೊಳ್ಳೋಣ.

ಯೇಸು ತನ್ನ ಶಿಷ್ಯರಿಗೆ ಈ ಪ್ರಶ್ನೆಯಿಂದ ಒಂದು ಸವಾಲನ್ನು ಹಾಕಿದನು. "ಒಬ್ಬ ಮನುಷ್ಯನು ಲೋಕವನ್ನೆಲ್ಲಾ ಸಂಪಾದಿಸಿಕೊಂಡರೂ ಪ್ರಾಣನಷ್ಟಪಟ್ಟರೆ ಅವನಿಗೆ ಪ್ರಯೋಜನವೇನು?" (ಮತ್ತಾಯ 16:26). ಈ ಯೇಸು ಕ್ರಿಸ್ತನ ಪ್ರಶ್ನೆಯನ್ನು ಸ್ವಲ್ಪ ಮುಂದುವರಿಸುವದಾದರೆ, ಈ ವಾಕ್ಯಭಾಗಕ್ಕೆ ಅನ್ಯಾಯವಾಗುವದಿಲ್ಲ ಎಂದು ನೆನಸುತ್ತೇನೆ. ಒಬ್ಬ ಮನುಷ್ಯನು ಲೋಕವನ್ನೆಲ್ಲಾ ಸಂಪಾದಿಸಿ, ತನ್ನ ಮದುವೆಯ ಜೀವಿತವನ್ನು ಕಳಕೊಂಡರೆ? ಒಬ್ಬ ಸ್ತ್ರೀಯು ಲೋಕವನ್ನೆಲ್ಲಾ ಸಂಪಾದಿಸಿ, ತನ್ನ ಮಕ್ಕಳನ್ನು ಬಿಟ್ಟುಬಿಟ್ಟರೆ? ಒಬ್ಬ ಮನುಷ್ಯನು ಲೋಕವನ್ನೆಲ್ಲಾ ಸಂಪಾದಿಸಿ, ತನ್ನ ಸದ್ಗುಣಗಳನ್ನು ಬಿಟ್ಟು ಬಿಟ್ಟರೆ? ಒಬ್ಬ ಸ್ತ್ರೀಯು ಲೋಕವನ್ನೆಲ್ಲಾ ಸಂಪಾದಿಸಿ, ತನ್ನಲ್ಲಿರುವ ಒಳ್ಳೇತನದ ಪ್ರಭಾವವನ್ನು ಕಳಕೊಂಡರೆ? ಈ ಪ್ರಶ್ನೆಗೆ ಉತ್ತರ ಒಂದೇ ಆಗಿರುತ್ತದೆ. ಅಲ್ಲಿ ಯಾವ ಲಾಭವು ಇಲ್ಲ. ಬಹು ಪ್ರಾಮುಖ್ಯವಾದದನ್ನು ನೀನು ಕಳಕೊಂಡು,ಲೋಕದಲ್ಲಿ ದೊಡ್ಡ ಯಶಸ್ಸನ್ನು ಪಡೆದವನಾಗಿದ್ದರೂ, ಅದೇ ಸಮಯದಲ್ಲಿ ದೊಡ್ಡ ಸೋಲನ್ನು ಅನುಭವಿಸಿದವನಾಗಿರುತ್ತಿ.

---

ಟಿಪ್ಪಣೆಗಳು

[1]8ನೇ ಅಧ್ಯಾಯದ ಮಾತುಗಳು ಬಹುಶ ಅನುಕ್ರಮಣಿಕೆಗೆ ಕ್ರಮವಾಗಿಲ್ಲದಿದ್ದರೂ, ಪಾಠದ ಪ್ರಸ್ತಾಪಕ್ಕೆ ಅವಶ್ಯವಿರುವ ವಾಕ್ಯದ ಸೇತುವೆಯಾಗಿದೆ. [2]KJV ಬೈಬಲ್ ಇಬ್ರಿಯ ಲಿಖಿತದಲ್ಲಿ: "ದಾವೀದನು ಫಿಲಿಷ್ಟಿಯರ ಕೈಯಿಂದ ಮೆತೆಗ್ ಅವನ್ನು ತೆಗೆದುಕೊಂಡನು" - ಮೆಡೆಗ್ ಅಮ್ಮಾ ಇದರ ನಿಜವಾದ ಅರ್ಥ "ತಾಯಿ ಪಟ್ಟಣದ ಮೇಲೆ ಹತೋಟಿ" (ASVಯನ್ನು ನೋಡಿ). ಆದುದರಿಂದ ದಾವೀದನು "ತಾಯಿ ಮುಖ್ಯ ಪಟ್ಟಣದ ಮೇಲೆ ಹತೋಟಿಯನ್ನು ತೆಗೆದುಕೊಂಡನು." ಅಥವಾ "ದೊಡ್ಡದಾದ." ತಾಯಿ ಎಂದರೆ ಇನ್ನೊಂದು ಅರ್ಥ ಮುಖ್ಯವಾದದ್ದು: "ಸರ್ವಯುದ್ಧಗಳ ತಾಯಿ" ಎಂಬುದಾಗಿದೆ. [3]ಪೂರ್ವಕಾಲ ವೃತ್ತಾಂತದ ಬರಹಗಾರನು ಹೇಳುವದೇನೆಂದರೆ "ಪಟ್ಟಣಗಳ ತಾಯಿ" ಎಂದು ಗತ್ ಊರನ್ನು ಕರೆದಿದ್ದಾನೆ: "ದಾವೀದನು ಅವರನ್ನು ಸೋಲಿಸಿ ಅವರಿಂದ ಗತ್ ಪಟ್ಟಣವನ್ನು ಅದರ ಗ್ರಾಮಗಳನ್ನು ತೆಗೆದುಕೊಂಡನು" (1 ಪೂರ್ವಕಾಲವೃತ್ತಾಂತ 18:1). [4]ಈ ಯುದ್ಧಗಳು ಯಾವಾಗ ನಡೆದವು ಎಂದು ನಾವು ಕೇವಲ ಊಹೆ ಮಾಡಬಹುದು, ದಾವೀದನು ತಪ್ಪಿಸಿಕೊಂಡು ಹೋದ ಸಮಯದಲ್ಲಿ ಅಥವಾ ಯೂದಾಯದಲ್ಲಿ ಅವನ 71/2 ವರ್ಷದ ಅವಧಿಯಲ್ಲಿ ಈ ಯುದ್ಧವು ನಡೆದಿರಬಹುದು ಎಂದು ಕೆಲವರು ಯೋಚಿಸುತ್ತಾರೆ (2 ಸಮುವೇಲ 21). 2 ಸಮುವೇಲ 2:5 ಮತ್ತು 2 ಸಮುವೇಲ 8:1 ನಡೆದ ನಿರ್ಧಾರದ ಯುದ್ಧವು, ದಾವೀದನ ಜೀವನದ ಅಂತ್ಯದಲ್ಲಿ ನಡೆದವು ಎಂದು ಇನ್ನೂ ಕೆಲವರ ಆಲೋಚನೆ. ಫಿಲಿಷ್ಟಿಯರ ತಪ್ಪದೆ ದಾವೀದನ ಮೇಲೆ ಯುದ್ಧ ಮಾಡುತ್ತಿದ್ದರಿಂದ, ಅವನು "ಬಹಳವಾಗಿ ದಣಿದನು" ಎಂದು (2 ಸಮುವೇಲ 21:15) ತಿಳಿಸುತ್ತದೆ. [5]ಈ ಭರ್ಜಿಯು ಗೊಲ್ಯಾತನಂತೆ ದೊಡ್ಡದಾಗಿರಲಿಲ್ಲ, ಅದರ ಬಾರ ದೊಡ್ಡ ಸುತ್ತಿಗೆಯ ತಲೆಯಂತಿತ್ತು! [6]"ಅದು *ಹೊಸದಾದ* ಕತ್ತಿ" (2 ಸಮುವೇಲ 21:16). [7]1 ಸಮುವೇಲ 26:6-9; 2 ಸಮುವೇಲ 16:8, 9; 19:21. [8]2 ಸಮುವೇಲ 23:24. [9]2 ಸಮುವೇಲ 21:19 ಹೇಳುತ್ತದೆ, ದೈತ್ಯನ ಹೆಸರು ಗೊಲ್ಯಾತ 2 ಪೂರ್ವಕಾಲವೃತ್ತಾಂತ 20:5 ಗೊಲ್ಯಾತನ ತಮ್ಮನಾದ ಲಹ್ಮಿ ಎಂಬುದಾಗಿ ಹೇಳುತ್ತದೆ. KJV ಆಕಾಸ್ಮತಾಗಿ "ಸಹೋದರನಿದ್ದನು" ಎಂಬುದು 2 ಸಮುವೇಲದಲ್ಲಿ ಬಿಟ್ಟಿ ಹೋಗಿತ್ತು ಎಂದು ನೆನಸಿ ಅದನ್ನು ಸೇರಿಸಿತು. "ಗೊಲ್ಯಾತು" ಎಂಬುದು ಮನೆತನದ ಹೆಸರಾಗಿರಬಹುದು ಅಥವಾ ಬಿರುದಾಗಿರಬಹುದು ಮತ್ತು ಲಹ್ಮಿ "ಒಬ್ಬ" ಗೊಲ್ಯಾತನಿಗೆ ಗೊಲಿಯಾತನೆಂಬ ತಮ್ಮನಿದ್ದನು ಅವನು "ಗೊಲ್ಯಾತನು" ಎಂದು ಊಹಿಸಿದನು. ದಾವೀದನು ಗೊಲ್ಯಾತನ ಬದಲಾಗಿ ಬೇರೆಯವರನನ್ನು ಕೊಂದಿರಬಹುದು ಎಂದು ದಾವೀದನ ಹೆಸರಿಗೆ ಬದಲಾಗಿ ಎಲ್ಹಾನನು ಎಂದು ಯೋಚಿಸುತ್ತಾರೆ, ಎಲ್ಕನಾನನು ಯಾಯಿರನ ಮಗನು (1 ಪೂರ್ವಕಾಲವೃತ್ತಾಂತ 20:5). ಅವನು ದಾವೀದನ ಶೂರನು

(2 ಸಮುವೇಲ 23:24). ದಾವೀದನು, ಗೊಲ್ಯಾತನನ್ನು ಕೊಂದು ಅನೇಕ ವರ್ಷಗಳಾದ ಮೇಲೆ ಈ ಘಟನೆ ನಡೆಯಿತು. [10]ಮೋವಾಬ್ಯರು ತಂದೆಯಿಂದಲೇ ಉಂಟಾದ ಸಂತತಿ (ಹೋಲಿಸು ಆದಿಕಾಂಡ 19:37).

[11]ರೂತಳು 4:17-22. [12]1 ಸಮುವೇಲ 22:3, 4. [13]ಅಮ್ಮೋನಿಯರಿಗೆ ಬದಲಾಗಿ ಎಂದು (2 ಸಮುವೇಲ 12:31 ಸಮಯವಿರುವಾಗ ಗಮನಿಸು). [14]ಮೂರರಲ್ಲಿ ಎರಡು ಅಂಶ ಸೈನಿಕರು ಅನ್ನುವಂಥದ್ದು ಸ್ಪಷ್ಟವಾಗಿಲ್ಲ, ಪುರುಷರು ಅಥವಾ ಒಟ್ಟು ಜನಸಂಖ್ಯೆ. [15]Robert Jamieson, A. R. Fausset, and David Brown, *Commentary on the Whole Bible,* rev. ed. (Grand Rapids, Mich.: Zondervan Publishing Co., 1961), 233. [16]ಗಮನಿಸು 2 ಸಮುವೇಲ 8:12. 2 ಸಮುವೇಲ 10-12 ಅಮ್ಮೋನಿಯರ ಮೇಲೆ ದಾವೀದನು ಗಳಿಸಿದ ಜಯದ ಬಗ್ಗೆ ತಿಳಿಸುತ್ತದೆ. [17]ಅಮ್ಮೋನಿಯರು ಸಹ ತಂದೆಯಿಂದ ಉಂಟಾದ ಜನಾಂಗ (ಹೋಲಿಸು ಆದಿಕಾಂಡ 19:38). [18]ಸಮಾನವಾದ ವಾಕ್ಯಗಳನ್ನು ಪೂರ್ವಕಾಲವೃತ್ತಾಂತದಲ್ಲಿ ಓದುವಾಗ ಹೆಸರು ಮತ್ತು ಸಂಖ್ಯೆಗಳು ವ್ಯತ್ಯಾಸವಿರುತ್ತದೆ. ಲೆಕ್ಕ ಚಾರವು ಬೇರೆಯಾಗಿರುತ್ತದೋ? ಒಂದು ಅಥವಾ ಬೇರೆ ಪಠ್ಯಗಳು ವರ್ಷಗಳ ಅಂತರದಲ್ಲಿ ತಿಳಿಯದ ರೀತಿಯಲ್ಲಿ ಮಾರ್ಪಾಟಾಗಿದೆಯೋ? ಈ ಪ್ರಶ್ನೆಗೆ ನಮ್ಮಲ್ಲಿ ಉತ್ತರವಿಲ್ಲ. ನಮ್ಮ ಉದ್ದೇಶಕ್ಕಾಗಿ ಸಾಮಾನ್ಯವಾಗಿ 2 ಸಮುವೇಲ ಇದರಿಂದ ತಲೆಬರಹಗಳನ್ನು ಚಿತ್ರಗಳನ್ನು ಉಪಯೋಗಿ ಸೋಣ. [19]ಕುದುರೆಯ "ಕಾಲಿನ ಹಿಂಬಾದಿಯ" ಸರಗಳನ್ನು ಕತ್ತರಿಸುವ ಮೂಲಕ ಅವುಗಳಿಂದ ಯುದ್ಧಕ್ಕೆ ಪ್ರಯೋಜನವಾಗುವದಿಲ್ಲ, ಪ್ರಾಣಿಗಳ ಹಕ್ಕಿನ ಈ ದಿವಸಗಳಲ್ಲಿ ಹಿಂಸಾತ್ಮಕವಾಗಿ ಕಾಣುತ್ತದೆ, ಕುದುರೆ ಗಳನ್ನು ಹತಿಸುವದಕ್ಕಿಂತ ಇದು ಕರುಣೆ ತೋರುವಂಥದ್ದಾಗಿತ್ತು. ದಾವೀದನು ಸ್ವಲ್ಪ ಉಪಯೋಗಿ ಯಾಗಿದ್ದನು (ಅರಸನು "ಕುದುರೆಯ ದಂಡನ್ನು ಕೂಡಿಸಿಕೊಳ್ಳ ಬಾರದು" [ಧರ್ಮೋಪದೇಶಕಾಂಡ 17:16]), ಹಾಗೂ ರಥಗಳು ಬೆಟ್ಟದ ಪ್ರದೇಶದಲ್ಲಿ ಉಪಯೋಗಿಸಬಾರದು. ಅವನ ವೈರಿಗಳ ಅವನ್ನು ಪುನ ರಣಭೂಮಿಯಲ್ಲಿ ಉಪಯೋಗಿಸಬಾರದು. ಆದರೂ ದಾವೀದನೂ ಒಂದು ನೂರು ರಥಗಳನ್ನು ಇಟ್ಟುಕೊಂಡಿದ್ದನು, ಯಾಕೆ? ಎಂದು ತಿಳಿದು ಬಂದಿಲ್ಲ (ದಾವೀದನ ಸ್ವಂತ ಮಾತುಗಳನ್ನು ಕೀರ್ತನೆ 20:7ರಲ್ಲಿ ಗಮನಿಸಿ). ಬಹುಶ ಧರ್ಮೋಪದೇಶಕಾಂಡದ 17:16 ಮಾತುಗಳನ್ನು ಉಲ್ಲಂಘಿಸಿದ್ದನು. (ಬಹುಶ ಇಲ್ಲಿಂದಲೇ ಅಬ್ಷಾಲೋಮನು ಕುದುರೆಗಳನ್ನು ರಥಗಳನ್ನು ಪಡಕೊಂಡಿದ್ದನು [2 ಸಮುವೇಲ 15:1]; ದಾಖಲೆಗಳ ಪ್ರಕಾರ ರಾಜವಂಶದಿಂದ ರಥಗಳನ್ನು ಉಪಯೋಗಿಸಿದವರಲ್ಲಿ ಅಬ್ಷಾಲೋಮನು ಮೊದಲಿಗನು.) [20]NASB ಮೊದಲ ಮುದ್ರಣದಲ್ಲಿ "ಸಿರಿಯನ್ನರು"; ಎಂದು ನಂತರದ ಮುದ್ರಣದಲ್ಲಿ "ಅರಾಮ್ಯರು" ಎಂದು ಅದು ಮೂಲ ಭಾಷೆಗೆ ಹತ್ತಿರವಾಗಿದೆ. ಅರಾಮ್ಯರು ಅಂದರೆ ಸಾಮಾನ್ಯವಾಗಿ ಸಿರಿಯನ್ನುರು. ಅರಾಮ್ಯರು ಜೋಭಾ ಪಟ್ಟಣದಲ್ಲಿದ್ದರು ಅಥವಾ ಸಿರಿಯನ್ನರು (ನೋಡಿ 2 ಸಮುವೇಲ 10:6).

[21]ಗಮನಿಸಿ 1 ಪೂರ್ವಕಾಲವೃತ್ತಾಂತ 18:8; 26:26ff.; 1 ಅರಸುಗಳು 7:5; 2 ಪೂರ್ವಕಾಲವೃತ್ತಾಂತ 5:1. [22]ಹಮಾತ್ ಪಟ್ಟಣವು, ದಮಸ್ಕದ ದಕ್ಷಿಣಕ್ಕೆ ಐವತ್ತು ಮೈಲುಗಳ ಅಂತರದಲ್ಲಿತ್ತು. [23]ಹಮಾತಿನ ಅರಸನು ದಾವೀದನೊಂದಿಗೆ ಹೊಂದಾಣಿಕೆ ಮಾಡಿಕೊಂಡಿದ್ದರಿಂದ, ಅವನು ದಾವೀದನ ಆಡಳಿತಕ್ಕೆ ಒಳಪಟ್ಟಿದ್ದನು. [24]ದಾವೀದನು ಮೊದಲೇ ಅಮಾಲೇಕ್ಯರನ್ನು ಸೋಲಿ ಸಿದ್ದನು (1 ಸಮುವೇಲ 30). [25]1 ಪೂರ್ವಕಾಲವೃತ್ತಾಂತ 22:14. [26]ಕೀರ್ತನೆ 60ರಲ್ಲಿರುವ ಟಿಪ್ಪಣಿ, ಯೋವಾಬನ ಜಯದ ಕುರಿತಾಗಿರುತ್ತದೆ. ಪೂರ್ವಕಾಲ ವೃತ್ತಾಂತದ ಬರಹಗಾರನು ಯೋವಾಬನ ಸಹೋದರನಾದ ಇದನ್ನು ಯೋಚಿಸತಕ್ಕದ್ದೆ (1 ಪೂರ್ವಕಾಲವೃತ್ತಾಂತ 18:12). ಯೋವಾಬನ ಸಾರಥ್ಯದಲ್ಲಿ, *ದಾವೀದನ* ಸೈನಿಕರು ಹೋರಾಡಿದರು, *ಅಭೀಷೈ* ನಿಗದಿತವಾದ, ಜಯದ ಯುದ್ಧಗಳನ್ನು ನಡಿಸಿದ್ದನು. [27]ಸೆಪ್ಟಜೂಯಂಟ್, ಸಿರಿಯಾಕ್ ಮುದ್ರಣ 11 ಇಬ್ರಿಯ ಬರಹಗಳು "ಎದೋಮ್ಯರು" ಎಂದು 2 ಸಮುವೇಲ 8:13 ತಿಳಿಸುತ್ತದೆ. [28]ಕೀರ್ತನೆ ಮುಂದೆ ಇರುವ ಟಿಪ್ಪಣಿಗಳನ್ನು ನೋಡಿರಿ. [29]ಜನರ ಮನಸ್ಸನ್ನು ಗೆದ್ದು ಕೊಳ್ಳುವಂತೆ ಅಬ್ಷಾಲೋಮನು ಯುದ್ಧವನ್ನು ಮಾಡಿದನು (ಮುಂದಿನ ಸಂಚಿಕೆಯಲ್ಲಿ "ಮನುಷ್ಯನು ಏನನ್ನು ಬಿತ್ತುತ್ತಾನೋ" ಎಂಬ ಪಾಠವನ್ನು ನೋಡಿರಿ). [30]1 ಪೂರ್ವಕಾಲ ವೃತ್ತಾಂತ 16:39 ಮಂಜೂಷವು ಚಾದೋಕನ ವಶದಲ್ಲಿತ್ತು (2 ಸಮುವೇಲ 15:24-29). 1 ಪೂರ್ವಕಾಲ ವೃತ್ತಾಂತದ 6:3-8, 50-53ರ ಪ್ರಕಾರ ಚಾದೋಕನು ನೇರವಾಗಿ ಆರೋನನ ಕುಲದವನಾಗಿದ್ದನು (1 ಪೂರ್ವಕಾಲವೃತ್ತಾಂತ 24:3ರನ್ನೂ ಸಹ ನೋಡಿರಿ).

[31]ಅಹೀಮೆಲೆಕನು ಸಹ ಆರೋನನ ವಂಶದವನೇ ಆದರೆ ಅವನ ಬೇರೆ ಮೂಲದಿಂದ ಬಂದವನು ಆದರೆ 2 ಸಮುವೇಲ 8:17ರಲ್ಲಿ ಗೊಂದಲವಿದೆ. ಆದರೆ ಇದನ್ನು "ಎಬ್ಯಾತಾರನ ಮಗನಾದ ಅಹೀಮೆಲೆಕನು" ಅಥವಾ "ಅಹೀಮೆಲೆಕನ ಮಗನಾದ ಎಬ್ಯಾತಾರನು" ಎಂದು ಓದಬಹುದೇ. ಅಹೀಮೆಲೆಕನ ಮಕ್ಕಳರೊಬ್ಬನಾದ ಎಬ್ಯಾತಾರನೆಂಬುವನು ತಪ್ಪಿಸಿಕೊಂಡು ಸೌಲನು

ಯಾಜಕರನ್ನು ಸಾಯಿಸಿದ ನಂತರ ದಾವೀದನು ಬಳಿಗೆ ಓಡಿಬಂದನು (1 ಸಮುವೇಲ 22:20). ಈ ವಿಷಯದ ನಿಮಿತ್ತ ಬದೋಕನು ಮತ್ತು ಎಬ್ಯಾತಾರನು ಯಾಜಕರ ಪಟ್ಟಿಯಲ್ಲಿ ಸೇರಲ್ಪಟ್ಟರು (2 ಸಮುವೇಲ 17:15; 20:25). ದಾವೀದನ ಬಳಿಗೆ ಓಡಿ ಬಂದ ಎಬ್ಯಾತಾರನಿಗೆ ಅಹೀಮೆಲೇಕನೆಂಬ ಮಗನಿದ್ದನು, ಅವನಿಗೆ *ಎಬ್ಯಾತಾನೆಂಬ* ಮಗನನ್ನು ಪಡೆದನು. ಅವರೆಲ್ಲರೂ ಮಹಾಯಾಜಕರಾಗಿ ಕಾರ್ಯ ನಿರ್ವಹಿಸಿದ್ದರು. ಎಬ್ಯಾತಾರನೆಂಬ ಹೆಸರು ಬಹುಶ ಅಹೀಮೆಲೇಕನೆಂಬ ಹೆಸರಿಗೆ ಒಳಬದಲಾವಣೆಯಾದ ಹೆಸರು. ಇದನು ಇತ್ಯಾರ್ಥ ಮಾಡಲು ಸಾಕಷ್ಟು ಪುರಾವೆಗಳಿಲ್ಲ. [32]ಫಿಲಿಷ್ಟಿಯದಿಂದ ಬಂದ ಬಾಡಿಗೆ ಸೈನಿಕರು ಪೆಲಾತ್ಯರು ದಾವೀದನೂ ಸಹ ಕುಲಗಳ ಅಂತರ್ಯುದ್ಧ ವನ್ನು ತಡೆಯುವ ಸಲುವಾಗಿ ಇಂಥ ಸೈನ್ಯದವರನ್ನು ಬಹುಶ ಪಡೆದಿರಬಹುದು. [33]ಕ್ರೇಟೆಯಿಂದ ಬಂದ ಬಾಡಿಗೆ ಸೈನಿಕರು, ಕೆಲಾತ್ಯರೆನಿಸಿಕೊಂಡಿದ್ದರು.[34]2 ಸಮುವೇಲ 23:20-23. [35]2 ಸಮುವೇಲ 8:18ರ ಮೂಲ ಇಬ್ರಿಯದಲ್ಲಿ, ದಾವೀದನ ಮಕ್ಕಳಿಗೂ ಸಹ "ಯಾಜಕರಾ ಗಿದ್ದರು" ಎಂದು ತಿಳಿಸುತ್ತದೆ. ಅವರು ಲೇವಿಯರು ಕುಲದವರಾಗದೆ ಇದ್ದದ್ದರಿಂದ ಪೂರ್ವಕಾಲವತ್ತಾಂತದ ಬರಹಗಾರನು ಅವರನ್ನು ಬೇರೆ ವಾಕ್ಯ ಶಬ್ದದಿಂದ ಪ್ರಬೋಧಿಸುತ್ತಾನೆ, ಸಾದಾರಣ ಆಲೋಚನೆಯಂತೆ ಅವರು ಕರೆಯುತ್ತಾರೆ. 2 ಸಮುವೇಲ 8ರಲ್ಲಿ NIV ಬೈಬಲ್ ಅವರನ್ನು "ರಾಜಸಲಹೆಗಾರರು" ಎಂದು ಕರೆಯುತ್ತಾರೆ. [36]Burton Coffman, *Commentary on Second Samuel* (Abilene, Tex.: ACU Press, 1992), 114. [37]2 ಸಮುವೇಲ 21, 2 ಸಮುವೇಲ 9ರ ನಂತರ, ನೆರವೇರಿದ್ದರೆ ಸೌಲನ ಇನ್ನುಳಿದ ವಂಶಸ್ಥರು ಸಹ ಬದುಕಿದ್ದರು (2 ಸಮುವೇಲ 21:8ನ್ನು ಗಮನಿಸಿ) ಚೀಬನಿಗೆ ದಾವೀದನ ಮೂಲ ವಾಗ್ದಾನ ತಿಳಿದಿತ್ತು, "ನಾನು *ಯೋನಾತಾನನ* ನಿಮಿತ್ತವಾಗಿ, ದಯೆಯನ್ನು ತೋರಿಸುವೆನು" ಮತ್ತು ಯೋನಾತನನ ಮನೆತನದವರಿಗೆ ಮಾತ್ರ. [38]1 ಪೂರ್ವಕಾಲವೃತ್ತಾಂತ 8:34ನ್ನು ನೋಡಿರಿ. "ಮೆರಿಬ್-ಬಾಲ್" ಅಥವಾ "ಮೆರಿಬಾಲ್" ಅದರ ಅರ್ಥ ನಿಶ್ಚಯವಿಲ್ಲ. ಬಾಲ್ ಅನ್ನುವಂಥದ್ದು "ಯೆಹೋವನು" ಎಂಬದಾಗಿ ಇರಬಹದು. ಒಂದು ವೇಳೆ ಅನ್ಯದೇವತೆ, ಅಥವಾ "ಬಾಳಿನ - ಎದು ರಾಳಿ" ಅಥವಾ "ದೇವರಿಗೆ - ಪ್ರೀಯನು." "ಬಾಳಿನ" ಹೆಸರನ್ನು ದೂರವಿರಿಸಿದ್ದಾರೆ ಅಥವಾ ತಪ್ಪಿಸಿದ್ದಾರೆ. 1 ಮತ್ತು 2 ಸಮುವೇಲನ ಬರಹಗಾರನು "ಶೇಮನು" ಎಂಬ ಇಬ್ರಿಯ ಪದಕ್ಕೆ ಬದಲಾಯಿಸಿರಬಹುದು ("ಈಷ್ಬೋಶೇತನ ಹೆಸರಿನ ಬಗ್ಗೆ ಇರುವ ಹಿಂದಿನ ಟಿಪ್ಪಣಿಯನ್ನು ನೋಡಿರಿ") "ಮೆಫೀಬೋಶೆತ್" ಅದರ ಅರ್ಥ "ಅವಮಾನವನ್ನು ಹರಡುವವನು" ಅಥವಾ "ಅವಮಾನದ ಎದು ರಾಳಿ." [39]2 ಸಮುವೇಲ 4:4ನ್ನು ನೋಡಿರಿ. [40]ಮಾಕೀರನು ಸೌಲನಿಗೂ ಅವನ ಸಂತಾನದವರಿಗೂ ಸಹಾಯಕನಾಗಿದ್ದನು ದಾವೀದನು ಮೆಫೀಬೋಷೆತನಿಗೆ ದಯೆಯನ್ನು ತೋರಿಸಿದ ನಂತರ ಮಾಕೀರನು ದಾವೀದನಿಗೆ ಸಹಾಯಕನೂ ಮತ್ತು ಹಿಂಬಾಲಕನೂ ಆದನು (2 ಸಮುವೇಲ 17:27-29).

[41]ಲೋದೇಬಾರು ಯಾವ ಸ್ಥಳದಲ್ಲಿತ್ತು ಎಂದು ತಿಳಿದಿರುವದಿಲ್ಲ. ಉತ್ತರ - ಉತ್ತರ ಪಶ್ಚಿಮದ ಮಹನೀಯೇಮಿನಿಂದ ಇಪ್ಪತ್ತು ಮೈಲುಗಳ ಅಂತರದಲ್ಲಿತ್ತು ಎಂದು ಕೆಲವರ ಯೋಚನೆ ಅದು ಈಷ್ಬೋಶೆತನಿಗೆ ರಾಜದಾನಿಯಾಗಿತ್ತು. [42]ಮೆಫೀಬೋಷೆತನಿಗೆ ಮೀಕನೆಂಬ ಮಗನಿದ್ದನು (2 ಸಮುವೇಲ 9:12). ಮೀಕನ ವಂಶಸ್ಥರು ಇಸ್ರಾಯೇಲಿನಲ್ಲಿ ಪ್ರಸಿದ್ಧಿ ಹೊಂದಿದ್ದರು (1 ಪೂರ್ವಕಾಲವೃತ್ತಾಂತ 8:34-40; 9:40-44). [43]ಅಮ್ಮೀಯೇಲನು ಬೆತ್ಷೆಬಳ ತಂದೆಯಾಗಿದ್ದನು 1 ಪೂರ್ವಕಾಲವೃತ್ತಾಂತ 3:5, ಇವನು ಅಮ್ಮೀಯೇಲನೆ ಎಂಬ ಸಂಶಯವಿದೆ, ಹೇಗೂ ಮಾಕೇರನೂ ಮತ್ತು ಬೆತ್ಷೆಬಳು ಸಹೋದರ, ಸಹೋದರಿಯಾಗಿದ್ದರು - ನಂತರ ಮಾಕೀರನು ದಾವೀದನ ಬಾವನಾದನು. [44]ಮತ್ತಾಯ 2:8. [45]ಬಹುಶ ಮೆಫೀಬೊಷೆತನನ್ನು ಹೊತ್ತುಕೊಂಡು ಬಂದರು. [46]ದಾವೀದನು ತನ್ನ ಹೆಸರನ್ನು ಹೇಳಿದನು (2 ಸಮುವೇಲ 9:6). ಮೆಫೀಬೋಷೆತನ ಹೆಸರು ಹೇಳಲ್ಪಟ್ಟಾಗ, ನಾನು ತಿಳಿಯುತ್ತೇನೆ ದಾವೀದನು ತಾನು ತನ್ನ ಸ್ನೇಹಿತನ ಮಗನೆಂದು ತಿಳಿದಿರಲಿಲ್ಲ. [47]ಬಾಗಿ ನಮಸ್ಕರಿಸುವದು ರಾಜ ಸನ್ನಿದಿಗೆ ಪ್ರವೇಶ ಮಾಡುವ ಮಾರ್ಗವಾಗಿತ್ತು. [48]ನಾಯಿ ಎಂಬುದಾಗಿ ತನ್ನನ್ನು ತಾನೇ ಕರಸಿಕೊಳ್ಳುವದು ತಗ್ಗಿಸುವಿಕೆಯ ಸೂಚನೆಯಾಗಿತ್ತು. ಸೌಲನ ಮುಂದೆ ದಾವೀದನೂ ಸಹ ಈ ಮಾತನ್ನು ಹೇಳಿದ್ದನು (1 ಸಮು ವೇಲ 24:14). [49]2 ಸಮುವೇಲ 9:9-11 ನಂತರದ ಘಟನೆಗಳ ಬೆಳಕಿನಲ್ಲಿ [2 ಸಮುವೇಲ 16:1-4] ಚೀಬನು ಪ್ರಶ್ನೆಯಿಲ್ಲದೆ ಒಪ್ಪಿಕೊಂಡನು ಎಂದು ನಂಬುತ್ತೇನೆ. [50]ಮೆಫೀಬೋಷೆತನ ಕಥೆಯು ಇಲ್ಲಿಗೆ ಮುಗಿಯಲಿಲ್ಲ, ಹೇಗೂ ದಾವೀದನು ಅವನ ಪ್ರಾಣವನ್ನು ಕಾಪಾಡಿದನು (2 ಸಮುವೇಲ 21:7, 8). ಅಬ್ಷಾಲೋಮನಿಂದ ದಾವೀದನು ತಪ್ಪಿಸಿಕೊಂಡಾಗ, ಪುನ ಮೆಫೀಬೋಷೆತನ ಕಥೆಯು ಮುಂದುವರಿಯುತ್ತದೆ (2 ಸಮುವೇಲ 16:1-4; 19:24-30).

[51]ಇದು ಪುನ ಅನುಕ್ರಮಣಿಕೆಯಾಗಿರದೆ ಬಹುಶ ಸೇತುವೆಯ ಮಾತು. [52]ನಾಹೋಶನು ಸೌಲನ ವೈರಿಯಾಗಿದ್ದರಿಂದ (1 ಸಮುವೇಲ 11:1-11), ಬಹುಶ ದಾವೀದ ನಿನಗೆ ದಯೆ ತೋರಿಸಿದನು, ಇದರ ಅರ್ಥ ಸೌಲನಿಗೆ ವಿರೋಧದ ಸೂಚನೆ. [53]ರಬ್ಬ ಎಂಬುದು "ಪಟ್ಟಣ" 2 ಸಮುವೇಲ 10:3ರಲ್ಲಿ

ತಿಳಿಸಲಾಗಿದೆ. ಅದು ಯೋರ್ದೋನ್ ಹೊಳೆಯ ಪೂರ್ವದಲ್ಲಿತ್ತು. ಯೆರಿಕೋ ಪಟ್ಟಣದ ಪೂರ್ವಕ್ಕೆ ಇಪ್ಪತ್ತಮೂರು ಮೈಲುಗಳ ಅಂತರದಲ್ಲಿತ್ತು. ಈ ಹೊತ್ತು ಅದು ಅಮ್ಮೊನ್ ಎಂಬ ಹೆಸರಿನಲ್ಲಿ ಯೋರ್ದೋನಿನ ರಾಜಧಾನಿಯಾಗಿದೆ. [54]ಯೆಶಾಯ 20:4 ನೋಡಿರಿ. [55]ಪೂರ್ವಕಾಲ ವೃತ್ತಾಂತದ ಬರಹಗಾರನು ಇವರ ಬಾಡಿಗೆ "1,000 ಬೆಳ್ಳಿಯ ತಲಾಂತುಗಳು" (1 ಪೂರ್ವಕಾಲವೃತ್ತಾಂತ 19:6) - ಸುಮಾರು 10 ಮಿಲಿಯನ್ ಡಾಲರ್‌ಗಳು ಎಂದು ತಿಳಿಸುತ್ತಾನೆ. [56]ಮಾಕಾ ಮತ್ತು ತೋಬಾದವರು ಅಮ್ಮೋನಿಯರಿಗೆ ನೆರೆಹೊರೆಯವರಾಗಿದ್ದರು. [57]ಹದದ್ದೇಜರನು ಚೋಬದ ಅರಸನು ಎತ್ತಿಕಟ್ಟುವ ವ್ಯಕ್ತಿಯಾಗಿದ್ದನು (2 ಸಮುವೇಲ 10:16, 19). 8ನೇ ಅದ್ಯಾಯ (ವಚನಗಳು 3, 5, 7-10) ಹದೆದ್ದೇ ಜರನೊಂದಿಗೆ ಈಗಾಗಲೇ ದಾವೀದನು ಹೋರಾಟ ಮಾಡಿದ್ದನು. ಅಧ್ಯಾಯ 8 ಮತ್ತು 10ರಲ್ಲಿ ಹೇಳ ಲ್ಪಟ್ಟ ಯುದ್ಧಗಳ ಸಂಬಂಧದ ಬಗ್ಗೆ ಹೆಚ್ಚು ಮಾಹಿತಿ ಇರುವದಿಲ್ಲ. ಅಧ್ಯಾಯ 10ರಲ್ಲಿಯ ಯುದ್ಧಗಳು ಮುಂಚೆ ನಡೆದಿರಬಹುದೆಂದು ಮತ್ತು ಕೆಲವರು ಅದೆ ಯುದ್ಧದ ಭಾಗವೆಂದು ಹೇಳುತ್ತಾರೆ. [58]"ಅರಾ ಮ್ಯರು ದಾವೀದನಿಗೆ ಕಾಣಿಕೆಗಳನ್ನು ನೀಡುವದರ ಮೂಲಕ ಅವನಿಗೆ ಸೇವಕರಾಗಿದ್ದರು" ಬಹುಶ ಇದು 2 ಸಮುವೇಲ 8:6ಕ್ಕೆ ಹೋಲಿಕೆಯಾಗಿದೆ. [59]2 ಸಮುವೇಲ 11:1. [60]1 ಪೂರ್ವಕಾಲವೃತ್ತಾಂತ 20:1-3.

[61]2 ಸಮುವೇಲ 11:1, 17-24. [62]2 ಸಮುವೇಲ 12:27 NASB, KJV, ಮತ್ತು RSVಯಲ್ಲಿ "ನೀರಿನ ಪಟ್ಟಣ." NIVಯಲ್ಲಿ "ಇದು ನೀರಿನ ಸರಭರಾಜು" ಎಂದು ಇದೆ. [63]ಸಾಮಾನ್ಯವಾಗಿ ಯಾರೂ, ಪಟ್ಟಣದಲ್ಲಿ ಕೊಳ್ಳೆಯನ್ನು ಸಂಪಾದಿಸಿದರೋ, ಅದು ಅವರಿಗೆ ಮೀಸಲಾಗಿತ್ತು. ದಾವೀದನು ತನ್ನನ್ನು ಅವಮಾನಪಡಿಸಿಕೊಂಡಿದ್ದರೂ, ಯೋವಾ ಬನು ಈ ವಿಷಯದಲ್ಲಿ ಯಥಾರ್ಥವಾಗಿದ್ದನು. [64]"ಅರಸನು" ಎಂಬ ಹೆಸರು ತರ್ಜುಮೆಗೊಂಡು, ಅಮ್ಮೋನಿಯರ "ದೇವತೆ"ಗೆ ಹೋಲಿಕೆ ಯಾಗಿದೆ. ಒಂದು ತಲಾಂತು ಅಂದರೆ 100ರಿಂದ 125 ಪೌಂಡುಗಳಾಗಿರುವದರಿಂದ ಕಿರೀಟವು ವಿಗ್ರಹದ ತಲೆಯ ಮೇಲಿತ್ತು ಎಂದು ಯೋಚಿಸುತ್ತಾರೆ. ಬಹುಶ ಇರಬಹುದು ನೆನಪಿರಲಿ. ಆ ರೀತಿಯ ಕಿರೀಟಗಳು, ಪ್ರದರ್ಶನಕ್ಕೆ ವಿನ ಧರಿಸಿಕೊಳ್ಳುವದಕ್ಕಲ್ಲ (ಗಮನಿಸತಕ್ಕದ್ದು: ಈ ಕಿರೀಟದ ಈ ದಿನದ ಕ್ರಯ ಕಾಲು ಮಿಲಿಯನ್ ಡಾಲರ್). [65]NASB ಬೈಬಲ್ ಮೂಲ ಭಾಷೆಗೆ ಹತ್ತಿರವಾಗಿದೆ. ಬರಹಗಾರನು, ಅಮ್ಮೊನಿಯರನ್ನು ಗುಲಾಮರನ್ನಾಗಿಸಿ ಅಥವಾ ಹಿಂಸೆ ನೀಡಿ ಎಂದು ಹೇಳುವವನಾಗಿದ್ದಾನೋ? ಇದು ಒಂದು ಪ್ರಶ್ನೆ ಯಾಕೆಂದರೆ ನಂತರ ಅಮ್ಮೋನಿಯರಲ್ಲಿ ಒಬ್ಬನು ದಾವೀದನಿಗೆ ಸಹಾಯ ಮಾಡಿದನು (2 ಸಮುವೇಲ 17:27), ದಾವೀದನು ಅವರನ್ನು ಹಿಂಸಿಸಿದನು ಎಂದು ನಾನು ನಂಬುವದಿಲ್ಲ. ನಾನು NIVಯನ್ನು ಉಪಯೋಗಿಸಿ, ಹೇಗೂ ಹೇಗೆ ದಾವೀದನು, ಮೊವಾಬ್ಯರನ್ನು ನಡಸಿಕೊಂಡನು ಎಂದು (ಅಮ್ಮೋನಿಯರು ಅಣ್ಣನ ಮಕ್ಕಳು) ದಾವೀದನ ಸೇವಕರಿಗೆ ಅವರು ಮಾಡಿದ ಅವಮಾನಕ್ಕಾಗಿ, ಅಮ್ಮೋನಿಯರಿಗೆ ದಾವೀದನು ಸೇಡು ತೀರಿಸಿಕೊಂಡನು. [66]ಈ ನದಿಯು ಈಜಿಪ್ಟಿನ ನೈಲ್ ನದಿಯಾಗಿರುವದಿಲ್ಲ. ನಕ್ಷೆಯನ್ನು ನೋಡಿ. [67]ಗಮನಿಸಿ 1 ಅರಸು 4:21-24. [68]ಮತ್ತಾಯ 22:37, 38; 6:33. [69]ದೇವರ ಸನ್ನಿಧಿಯಲ್ಲಿ ದಾವೀದನು *ಪ್ರಮಾಣ* ಮಾಡಿದ್ದನು (1 ಸಮುವೇಲ 20:16, 17 ನೋಡಿರಿ). [70]ಮತ್ತಾಯ 19:3-9ನ್ನು ನೋಡಿರಿ.

[71]ಈ ಮಾತುಗಾರನ ವಿಷಯದಲ್ಲಿ ಹೆಸರನ್ನು ಹೆಸರಿಸದೆ ನಮೂದಿಸಲಾಗಿದೆ, R. Swindoll's study guide, *David: A Man After God's Own Heart* (Fullerton, Calif.: Insight for Living, 1988), 80.